PRGI NO : KNKAN/26/A0884

ಈ ನಮ್ಮ

# ಧೃತಿ ನ್ಯೂಸ್

E NAMMA DHURTHI NEWS KANNADA DAILY NEWS PAPER

ಸದೃಢತೆಯ ಹೆಜ್ಜೆಯೊಂದಿಗೆ..., ಕನ್ನಡ ದಿನಪತ್ರಿಕೆ

- ಕೊಪ್ಪಳ
- ವಿಜಯನಗರ
- ರಾಯಚೂರು
- ಬಳ್ಳಾರಿ
- ಗದಗ
- ಬಾಗಲಕೋಟೆ
- ಹಾವೇರಿ
- ಧಾರವಾಡ

ಸಂಪಾದಕರು: ಚಂದ್ರಕಾಂತ | ಸಂಪುಟ: 01 ಸಂಚಿಕೆ: 227 ಪುಟಗಳು: 04 ಬೆಲೆ: 02 ದಿನಾಂಕ: 27-10-2026 ಮಂಗಳವಾರ email: enammadhruthinews@gmail.com Pho : 7353595904




# ಮೋದಿ ವಿರುದ್ಧದ ವೈಯಕ್ತಿಕ ಟೀಕೆಗಳೇ ಕಾಂಗ್ರೆಸ್‌ಗೆ ಮುಳುವಾಗುತ್ತಿದೆಯೇ

**ಧೃತಿ ನ್ಯೂಸ್ ಸುದ್ದಿ**

ನವದೆಹಲಿ: ಪ್ರಧಾನಿ ನರೇಂದ್ರ ಮೋದಿ ಅವರನ್ನು ಗುರಿಯಾಗಿಸಿಕೊಂಡು ಕಾಂಗ್ರೆಸ್ ನಾಯಕರು ಪದೇಪದೇ ನೀಡುತ್ತಿರುವ ವೈಯಕ್ತಿಕ ಟೀಕೆಗಳು ಇದೀಗ ಮತ್ತೆ ರಾಜಕೀಯ ಚರ್ಚೆಗೆ ಗ್ರಾಸವಾಗಿವೆ.ಪ್ರಜಾಪ್ರಭುತ್ವದಲ್ಲಿ ಆಡಳಿತ ಪಕ್ಷವನ್ನು ಪ್ರಶ್ನಿಸುವುದು, ಪ್ರಧಾನಿಯ ನೀತಿಗಳನ್ನು ಟೀಕಿಸುವುದು ಮತ್ತು ಸರ್ಕಾರದ ವೈಫಲ್ಯಗಳನ್ನು ಜನರ ಮುಂದಿಡುವುದು ವಿರೋಧ ಪಕ್ಷದ ಜವಾಬ್ದಾರಿ. ಆದರೆ ನೀತಿ–ನಿರ್ಧಾರಗಳ ವಿಮರ್ಶೆಯ ಬದಲಿಗೆ ವೈಯಕ್ತಿಕ ನಿಂದನೆಗಳು, ವಿವಾದಾತ್ಮಕ ಹೇಳಿಕೆಗಳು ಮತ್ತು ಆಕ್ರಮಣಕಾರಿ ಭಾಷೆಯೇ ರಾಜಕೀಯ ಪ್ರಚಾರದ ಕೇಂದ್ರವಾಗುತ್ತಿದ್ದರೆ, ಅದು ಟೀಕಿಸುವ ಪಕ್ಷದ ರಾಜಕೀಯ ತಂತ್ರದ ಬಗ್ಗೆಯೇ ಪ್ರಶ್ನೆಗಳನ್ನು ಹುಟ್ಟುಹಾಕುತ್ತದೆ.

ಕಾಂಗ್ರೆಸ್ ಪಕ್ಷದ ಪಾಲಿಗೆ ಈ ಪ್ರಶ್ನೆ ಹೊಸದೇನಲ್ಲ. ನರೇಂದ್ರ ಮೋದಿ ಗುಜರಾತ್ ಮುಖ್ಯಮಂತ್ರಿಯಾಗಿದ್ದ ಕಾಲದಿಂದ ಹಿಡಿದು ಪ್ರಧಾನಿಯಾದ ನಂತರದವರೆಗೂ, ಅವರನ್ನು ಗುರಿಯಾಗಿಸಿಕೊಂಡು ಕಾಂಗ್ರೆಸ್‌ನ ಹಲವು ಪ್ರಮುಖ ನಾಯಕರು ನೀಡಿದ ಹೇಳಿಕೆಗಳು ರಾಜಕೀಯ ವಿವಾದಗಳಿಗೆ ಕಾರಣವಾಗಿವೆ. ಇಂತಹ ಹೇಳಿಕೆಗಳು ಬಿಜೆಪಿಗೆ ರಾಜಕೀಯವಾಗಿ ಪ್ರತ್ಯುತ್ತರ ನೀಡುವ ಅವಕಾಶ ಕಲ್ಪಿಸಿರುವುದಲ್ಲದೆ, ಕಾಂಗ್ರೆಸ್‌ನ ಪ್ರಚಾರದ ಆದ್ಯತೆಗಳ ಬಗ್ಗೆಯೂ ಚರ್ಚೆ ಹುಟ್ಟುಹಾಕಿವೆ. 2007ರ ಗುಜರಾತ್ ವಿಧಾನಸಭೆ ಚುನಾವಣೆಯ ಸಂದರ್ಭದಲ್ಲಿ ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ ಅವರು ನರೇಂದ್ರ ಮೋದಿ ಅವರನ್ನು ಗುರಿಯಾಗಿಸಿಕೊಂಡು 'ಮೌತ್ ಕಾ ಸೌದಾಗರ್' ಅಂದರೆ 'ಸಾವಿನ ವ್ಯಾಪಾರಿ' ಎಂಬ ಅರ್ಥದ ಪದಪ್ರಯೋಗ ಮಾಡಿದ್ದರು.ಇದು ದೊಡ್ಡ ವಿವಾದಕ್ಕೆ ಕಾರಣವಾಗಿತ್ತು. ಗುಜರಾತ್ ಚುನಾವಣೆಯಲ್ಲಿ ಬಿಜೆಪಿ ಜಯಗಳಿಸಿದ ಬಳಿಕ, ಈ



ಹೇಳಿಕೆಯನ್ನು ಕಾಂಗ್ರೆಸ್‌ನ ರಾಜಕೀಯ ತಪ್ಪುಗಳ ಉದಾಹರಣೆಯಾಗಿ ಬಿಜೆಪಿ ಪದೇಪದೇ ಪ್ರಸ್ತಾಪಿಸುತ್ತಾ ಬಂದಿದೆ. ಅದೇ ರೀತಿ, ಕಾಂಗ್ರೆಸ್‌ನ ಹಿರಿಯ ನಾಯಕ ಮಣಿಶಂಕರ್ ಅಯ್ಯರ್ ಅವರು ಮೋದಿ ಅವರ ಚಹಾ ಮಾರಾಟದ ಹಿನ್ನೆಲೆಯನ್ನು ಉಲ್ಲೇಖಿಸಿ ಮಾಡಿದ ಟೀಕೆಯೂ ದೊಡ್ಡ ರಾಜಕೀಯ ವಿವಾದಕ್ಕೆ ಕಾರಣವಾಗಿತ್ತು. 'ಚಾಯ್‌ವಾಲಾ' ಎಂಬ ಗುರುತನ್ನೇ ರಾಜಕೀಯವಾಗಿ ಬಳಸಿಕೊಂಡ ಮೋದಿ, ತಮ್ಮ ಸಾಮಾನ್ಯ ಹಿನ್ನೆಲೆಯನ್ನು ಜನಸಾಮಾನ್ಯರೊಂದಿಗೆ ಸಂಪರ್ಕ ಸಾಧಿಸುವ ಅಸ್ತ್ರವನ್ನಾಗಿ ಮಾಡಿಕೊಂಡರು. ಹೀಗಾಗಿ, ಅಯ್ಯರ್ ಅವರ ಟೀಕೆ ಬಿಜೆಪಿಗೆ ತಿರುಗೇಟು ನೀಡಲು ಅವಕಾಶ ಕಲ್ಪಿಸಿತು ಎಂಬ ವಿಶ್ಲೇಷಣೆಗಳು ವ್ಯಕ್ತವಾಗಿದ್ದವು. ಪ್ರಧಾನಿ ಮೋದಿ ಅವರನ್ನು ರಾವಣನಿಗೆ ಹೋಲಿಸಿ ಮಾಡಿದ ಟೀಕೆಯೂ ರಾಜಕೀಯ ವಾಗ್ವಾದಕ್ಕೆ ಕಾರಣವಾಗಿತ್ತು. ಇದೇ ರೀತಿ, ಮೋದಿ ಅವರನ್ನು 'ಭಸ್ಮಾಸುರ' ಎಂದು ಬಣ್ಣಿಸಿದ ಹೇಳಿಕೆಯೂ ಬಿಜೆಪಿ ಮತ್ತು ಕಾಂಗ್ರೆಸ್ ನಡುವಿನ ವಾಕ್ಸಮರಕ್ಕೆ ಇಂಧನ ನೀಡಿತ್ತು.ಇತ್ತೀಚೆಗೆ ಬಿಹಾರದಲ್ಲಿ ನಡೆದ ಚುನಾವಣಾ ಪ್ರಚಾರದ ವೇಳೆ, ಪ್ರಧಾನಿ ಮೋದಿ ಅವರನ್ನು ಉಲ್ಲೇಖಿಸಿ ಖರ್ಗೆ ಅವರು ನೀಡಿದರೆಂದು ವರದಿಯಾದ 'ಮೋದಿ ಹೋಗುತ್ತಾನೆ, ಅವರಪ್ಪನೂ ಹೋಗುತ್ತಾನೆ' ಎಂಬ ವಿವಾದಾತ್ಮಕ ಹೇಳಿಕೆಯೂ ಚರ್ಚೆಗೆ ಗ್ರಾಸವಾಗಿದೆ.

ಇಂತಹ ಹೇಳಿಕೆಗಳ ನಿಖರ ಸಂದರ್ಭ ಮತ್ತು ಪೂರ್ಣ ಭಾಷಣವನ್ನು ಪರಿಗಣಿಸುವುದು ಅಗತ್ಯವಾದರೂ, ರಾಜಕೀಯ ನಾಯಕರ ಭಾಷೆಯು ಸಾರ್ವಜನಿಕ ಚರ್ಚೆಯ ಗುಣಮಟ್ಟವನ್ನು ನಿರ್ಧರಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ ಎಂಬುದರಲ್ಲಿ ಅನುಮಾನವಿಲ್ಲ.ರಾಹುಲ್ ಗಾಂಧಿ ಅವರೂ ಮೋದಿ ಅವರನ್ನು ಗುರಿಯಾಗಿಸಿಕೊಂಡು ಹಲವು ಸಂದರ್ಭಗಳಲ್ಲಿ ತೀಕ್ಷ್ಣ ವೈಯಕ್ತಿಕ ಟೀಕೆಗಳನ್ನು ಮಾಡಿದ್ದಾರೆ. ಅದೇ ಸಮಯದಲ್ಲಿ, ಅವರು ನಿರುದ್ಯೋಗ, ಬೆಲೆ ಏರಿಕೆ, ಆರ್ಥಿಕ ಅಸಮಾನತೆ ಮತ್ತು ಸರ್ಕಾರದ ನೀತಿಗಳ ಕುರಿತು ಕೂಡ ನಿರಂತರವಾಗಿ ಪ್ರಶ್ನೆಗಳನ್ನು ಎತ್ತಿದ್ದಾರೆ. ಹೀಗಾಗಿ, ಕಾಂಗ್ರೆಸ್‌ನ ಸಂಪೂರ್ಣ ರಾಜಕೀಯವನ್ನೇ ವೈಯಕ್ತಿಕ ಟೀಕೆಗಳಿಗೆ ಸೀಮಿತಗೊಳಿಸುವ ಬದಲು, ಅದರ ರಾಜಕೀಯ ಸಂದೇಶಗಳಲ್ಲಿ ಯಾವುದು ಜನರ ಮೇಲೆ ಹೆಚ್ಚು ಪ್ರಭಾವ ಬೀರುತ್ತಿದೆ ಎಂಬುದನ್ನು ಪ್ರತ್ಯೇಕವಾಗಿ ವಿಶ್ಲೇಷಿಸಬೇಕಿದೆ.

**ಮಿತಿಮೀರಿದರೆ ಹಿನ್ನಡೆಯ ಭೀತಿ**

ಕಾಂಗ್ರೆಸ್ ನಾಯಕರು ಮಾಡುವ ಒಂದು ವಿವಾದಾತ್ಮಕ ಹೇಳಿಕೆಯೇ ಬಿಜೆಪಿಗೆ ಹಲವು ದಿನಗಳ ಪ್ರಚಾರದ ವಿಷಯವಾಗುತ್ತದೆ ಎಂಬುದು ಕಾಂಗ್ರೆಸ್ ಎದುರಿಸುತ್ತಿರುವ ರಾಜಕೀಯ ಸವಾಲುಗಳಲ್ಲಿ ಒಂದಾಗಿದೆ. ಇದಕ್ಕೆ ಬದಲಾಗಿ, ವೈಯಕ್ತಿಕ ಟೀಕೆಗಳು ಮತ್ತು ವಿವಾದಾತ್ಮಕ ಪದಪ್ರಯೋಗಗಳು ಮುನ್ನೆಲೆಗೆ ಬಂದರೆ, ಕಾಂಗ್ರೆಸ್‌ನ ನೀತಿ ಆಧಾರಿತ ಸಂದೇಶಗಳು ಮಸುಕಾಗುವ ಅಪಾಯವಿದೆ. ಚುನಾವಣಾ ಪ್ರಚಾರದಲ್ಲಿ ಭಾವನಾತ್ಮಕ ಪ್ರತಿಕ್ರಿಯೆಗಳು ಮಹತ್ವದ್ದಾಗಿದ್ದರೂ, ಅವು ದೀರ್ಘಕಾಲದ ರಾಜಕೀಯ ವಿಶ್ವಾಸಕ್ಕೆ ಪರ್ಯಾಯವಾಗಲಾರವು. ಇದೇ ಕಾರಣಕ್ಕೆ, ಕಾಂಗ್ರೆಸ್‌ನ ನಾಯಕತ್ವವು ತನ್ನ ರಾಜಕೀಯ ಸಂವಹನದ ಶೈಲಿಯನ್ನು ಮರುಪರಿಶೀಲಿಸಬೇಕೆಂಬ ಅಭಿಪ್ರಾಯ ರಾಜಕೀಯ ವಲಯಗಳಲ್ಲಿ ವ್ಯಕ್ತವಾಗುತ್ತಿದೆ. ಪ್ರತಿಯೊಂದು ಚುನಾವಣೆಯಲ್ಲೂ ಮೋದಿ ಅವರನ್ನು ಕೇಂದ್ರವಾಗಿಟ್ಟುಕೊಂಡು ಪ್ರಚಾರ ನಡೆಸುವುದಕ್ಕಿಂತ, ಸ್ಥಳೀಯ ಸಮಸ್ಯೆಗಳು, ರಾಜ್ಯವಾರು ನಾಯಕತ್ವ ಮತ್ತು ಜನರ ಬದುಕಿಗೆ ನೇರವಾಗಿ ಸಂಬಂಧಿಸಿದ ವಿಚಾರಗಳ ಮೇಲೆ ಗಮನಹರಿಸುವುದು ಪಕ್ಷಕ್ಕೆ ಹೆಚ್ಚು ಪರಿಣಾಮಕಾರಿಯಾಗಬಹುದು.

## ಕೇಸೂರ್ ಗ್ರಾಮದಲ್ಲಿ ಮಹರ್ಷಿ ವಾಲ್ಮೀಕಿ ಜಯಂತಿ ಆಚರಣೆ



**ಧೃತಿ ನ್ಯೂಸ್ ಸುದ್ದಿ**

ಕೇಸೂರ್: ಗ್ರಾಮದಲ್ಲಿ ಮಹರ್ಷಿ ವಾಲ್ಮೀಕಿ ಜಯಂತಿಯನ್ನು ಭಕ್ತಿಭಾವದಿಂದ ಆಚರಿಸಲಾಯಿತು. ಭಾವಚಿತ್ರಕ್ಕೆ ಸಂಗಯ್ಯ ಮಳಿಮಠ ಅವರು ಪೂಜೆ ಸಲ್ಲಿಸಿದರು.

ಕಾರ್ಯಕ್ರಮದಲ್ಲಿ ಯುವ ಮುಖಂಡ ಲಾಡ್ಲೆ ಮಷಕ್ ಯಲಬುರ್ಗಿ ಮಾತನಾಡಿ ಮಹರ್ಷಿ ವಾಲ್ಮೀಕಿ ಅವರು ರಾಮಾಯಣ ಮಹಾಕಾವ್ಯವನ್ನು ರಚಿಸುವ ಮೂಲಕ ಭಾರತೀಯ ಸಾಹಿತ್ಯ ಮತ್ತು ಸಂಸ್ಕೃತಿಗೆ ಅಪಾರ ಕೊಡುಗೆ ನೀಡಿದ್ದಾರೆ. ಅವರ ಜೀವನ, ಆದರ್ಶಗಳು ಹಾಗೂ ಸಾಹಿತ್ಯಿಕ ಸಾಧನೆಗಳು ಇಂದಿನ ಸಮಾಜಕ್ಕೂ ಮಾರ್ಗದರ್ಶನವಾಗಿವೆ. ಸತ್ಯ, ಧರ್ಮ, ನ್ಯಾಯ ಮತ್ತು ಮಾನವೀಯ ಮೌಲ್ಯಗಳನ್ನು ಪ್ರತಿಯೊಬ್ಬರೂ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂಬ ಸಂದೇಶವನ್ನು ಅವರ ಆದರ್ಶಗಳು ಸಾರುತ್ತವೆ. ಎಂದು ಹೇಳಿದರು. ಮಹರ್ಷಿ ವಾಲ್ಮೀಕಿ ಅವರ ಜೀವನ ಚರಿತ್ರೆ ಮತ್ತು ತತ್ವಾದರ್ಶಗಳನ್ನು ಯುವ ಪೀಳಿಗೆಗೆ ಪರಿಚಯಿಸುವುದು ಅಗತ್ಯವಾಗಿದೆ. ಸಮಾಜದಲ್ಲಿ ಸಮಾನತೆ, ಸಹೋದರತ್ವ ಹಾಗೂ ಸಾಮರಸ್ಯವನ್ನು ಬೆಳೆಸುವ ಮೂಲಕ ಮಹನೀಯರ ಜಯಂತಿಗಳನ್ನು ಅರ್ಥಪೂರ್ಣವಾಗಿ ಆಚರಿಸಬೇಕು ಎಂದು ಅಭಿಪ್ರಾಯಪಟ್ಟರು. ಮಹರ್ಷಿ ವಾಲ್ಮೀಕಿ ಅವರ ಆದರ್ಶಗಳನ್ನು ಸ್ಮರಿಸುವುದು ಕೇವಲ ಜಯಂತಿ ಆಚರಣೆಗೆ ಸೀಮಿತವಾಗದೆ, ಅವರ ವಿಚಾರಗಳನ್ನು ನಮ್ಮ ದೈನಂದಿನ ಜೀವನದಲ್ಲಿ ಪಾಲಿಸುವುದರ ಮೂಲಕ ಸಮಾಜದ ಅಭಿವೃದ್ಧಿಗೆ ಕೈಜೋಡಿಸಬೇಕು ಎಂಬ ಸಂದೇಶವನ್ನು ಕಾರ್ಯಕ್ರಮದ ಮೂಲಕ ಸಾರಲಾಯಿತು. ಈ ಸಂದರ್ಭದಲ್ಲಿ ವಾಲ್ಮೀಕಿ ಸಮಾಜದ ಮುಖಂಡರಾದ ಬಸವರಾಜ್ ಜಲಕಮದಿನ್ನಿ ಮುತ್ತಪ್ಪ ಗೊರ್ಜಿನಾಳ ನಾಗರಾಜ ಗ್ರಾಮದ ಮುಖಂಡರು, ಹಿರಿಯರು, ಯುವಕರು ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದು,

ಈ ನಮ್ಮ ಧೃತಿ ನ್ಯೂಸ್
ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.
ಮೊ: 7353595904

## ಇರಕಲಗಡದಲ್ಲಿ ಸರ್ವಧರ್ಮದವರಿಂದ ವಿಶಿಷ್ಟವಾಗಿ ಮಹರ್ಷಿ ವಾಲ್ಮೀಕಿ ಜಯಂತಿ ಆಚರಣೆ ಸರ್ವಧರ್ಮದ ಮುಖಂಡರು, ಯುವಕರ ಭಾಗಿ ; ಸಿಹಿ ಹಂಚಿ ಸಂಭ್ರಮ

**ಧೃತಿ ನ್ಯೂಸ್ ಸುದ್ದಿ**

ಕೊಪ್ಪಳ: ತಾಲೂಕಿನ ಇರಕಲಗಡ ಗ್ರಾಮದಲ್ಲಿ ಆದಿಕವಿ ಮಹರ್ಷಿ ವಾಲ್ಮೀಕಿ ಅವರ ಜಯಂತಿಯನ್ನು ವಿಶಿಷ್ಟವಾಗಿ ಹಾಗೂ ಸಂಭ್ರಮದಿಂದ ಆಚರಿಸಲಾಯಿತು. ಗ್ರಾಮದ ಸರ್ವಧರ್ಮದ ಸಮಾಜದ ಮುಖಂಡರು, ಯುವಕರು ಸೇರಿದಂತೆ ನೂರಾರು ಜನರು ಕಾರ್ಯಕ್ರಮದಲ್ಲಿ ಪಾಲ್ಗೊಂಡು ಪರಸ್ಪರ ಸಿಹಿ ಹಂಚುವ ಮೂಲಕ ಜಯಂತಿಯನ್ನು ಸಂಭ್ರಮಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಯುವ ಕಾಂಗ್ರೆಸ್ ಮುಖಂಡ ಹನುಮಂತಪ್ಪ ವನಬಳ್ಳಾರಿ ಅವರು, ಮಹರ್ಷಿ ವಾಲ್ಮೀಕಿ ಅವರು ಭಾರತೀಯ ಸಾಹಿತ್ಯ ಪರಂಪರೆಯಲ್ಲಿ ಮಹತ್ವದ ಸ್ಥಾನ ಹೊಂದಿದ್ದು, ಅವರ ಜೀವನ ಮತ್ತು ಆದರ್ಶಗಳು ಸಮಾಜಕ್ಕೆ ಸದಾ ಮಾರ್ಗದರ್ಶಿಯಾಗಿವೆ ಎಂದು ತಿಳಿಸಿದರು. ಕರ್ನಾಟಕ ಸೇರಿದಂತೆ ದೇಶದಾದ್ಯಂತ ಮಹರ್ಷಿ ವಾಲ್ಮೀಕಿ ಜಯಂತಿಯನ್ನು ಶ್ರದ್ಧೆ ಮತ್ತು ಸಂಭ್ರಮದಿಂದ ಆಚರಿಸಲಾಗುತ್ತದೆ. ವಿಶೇಷವಾಗಿ ವಾಲ್ಮೀಕಿ ಸಮುದಾಯದವರು ಈ ದಿನವನ್ನು ಹಬ್ಬದಂತೆ ಆಚರಿಸುತ್ತಾರೆ. ಜಯಂತಿಯ ಅಂಗವಾಗಿ ಮಹರ್ಷಿ ವಾಲ್ಮೀಕಿ ಅವರ ಭಾವಚಿತ್ರದೊಂದಿಗೆ ಶೋಭಾಯಾತ್ರೆ, ಮೆರವಣಿಗೆ, ರಾಮಾಯಣದ ಶ್ಲೋಕಗಳ ಪಠಣ ಹಾಗೂ ದೇವಾಲಯಗಳಲ್ಲಿ ವಿಶೇಷ ಪೂಜೆಗಳನ್ನು ಹಮ್ಮಿಕೊಳ್ಳಲಾಗುತ್ತದೆ ಎಂದರು.



ಮನುಷ್ಯ ತನ್ನ ದುಷ್ಟ ಗುಣಗಳನ್ನು ತ್ಯಜಿಸಿ ಜ್ಞಾನ, ಕರುಣೆ ಹಾಗೂ ಧರ್ಮದ ಮಾರ್ಗದಲ್ಲಿ ನಡೆದರೆ ಶ್ರೇಷ್ಠ ವ್ಯಕ್ತಿಯಾಗಬಹುದು ಎಂಬ ಮಹತ್ವದ ಜೀವನ ಸಂದೇಶವನ್ನು ಮಹರ್ಷಿ ವಾಲ್ಮೀಕಿ ಅವರ ಆದರ್ಶಗಳು ಸಾರುತ್ತವೆ. ಅವರ ಚಿಂತನೆಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಸಮಾಜದಲ್ಲಿ ಸೌಹಾರ್ದತೆ, ಸಹಬಾಳ್ವೆ ಮತ್ತು ಮಾನವೀಯ ಮೌಲ್ಯಗಳನ್ನು ಬೆಳೆಸಬೇಕು ಎಂದು ಹೇಳಿದರು. ಇರಕಲಗಡ ಗ್ರಾಮದಲ್ಲಿ ಸರ್ವಧರ್ಮದ ಮುಖಂಡರು ಹಾಗೂ ಯುವಕರು ಒಗ್ಗಟ್ಟಿನಿಂದ ಜಯಂತಿ ಆಚರಿಸಿರುವುದು ಸಾಮಾಜಿಕ ಸಾಮರಸ್ಯಕ್ಕೆ ಸಾಕ್ಷಿಯಾಯಿತು. ಎಲ್ಲರೂ ಒಟ್ಟಾಗಿ ಪಾಲ್ಗೊಂಡು ಸಿಹಿ ಹಂಚಿಕೊಂಡು ಸಂಭ್ರಮಿಸಿದ್ದು ಕಾರ್ಯಕ್ರಮದ ವಿಶೇಷವಾಗಿತ್ತು. ಈ ಸಂದರ್ಭದಲ್ಲಿ ಗ್ರಾಮದ ಹಿರಿಯರಾದ ವೀರಬಸಪ್ಪ ಶೆಟ್ರು, ಬಸವಕುಮಾರ್ ಪಟ್ಟಣಶೆಟ್ಟಿ, ಮಹೇಶ್ ದೇಸಾಯಿ, ಕೊಟ್ರೇಶ್ ಕೊಪ್ಪಳ, ಬಸವರಾಜ್ ಬೋವಿ, ವೀರೇಶ್ ಹಟ್ಟಿ, ಸೋಮು ನಾಯಕ್, ಸೋಮು ಕುದುರೆಮೋತಿ, ವೆಂಕನಗೌಡರ್ ಮೇಟಿ, ಅಪ್ಪಣ್ಣ ದೇಸಾಯಿ, ರಾಜು ಉಂಡಿ, ರುದ್ರೇಶ್ ಕುಂಬಾರ್, ಮಂಜು ದೇಸಾಯಿ, ಹನುಮೇಶ್ ತಾಳ, ಕನಕಪುರ, ಸಣ್ಣಪ್ಪ ತಲ್ಲೂರು, ಯಲ್ಲಪ್ಪ ಗುತ್ತೂರು ಸೇರಿದಂತೆ ಗ್ರಾಮದ ಮುಖಂಡರು ಹಾಗೂ ನೂರಾರು ಯುವಕರು ಉಪಸ್ಥಿತರಿದ್ದರು.

## ಸ್ಕೇಟಿಂಗ್ ಸ್ಪರ್ಧೆಯಲ್ಲಿ ಕಂಚಿನ ಪದಕ ಪಡೆದ ಗಂಗಾವತಿಯ ಕ್ರೀಡಾಪಟುಗಳು




**ಧೃತಿ ನ್ಯೂಸ್ ಸುದ್ದಿ**

ಕೊಪ್ಪಳ: ರಾಜ್ಯಮಟ್ಟದ ಸ್ಕೇಟಿಂಗ್ಸ್ ಸ್ಪರ್ಧೆಗೆ ಆಯ್ಕೆ ದಿ, 24 25 ಅ, 2026 ರಂದು ಬೆಂಗಳೂರಿನ ಬಿಟಿಎಂ ಲೇಔಟ್ ನಲ್ಲಿ ಮೂರನೇ ಬೆಂಗಳೂರು ಜಿಲ್ಲಾ ಮಟ್ಟದ ಸ್ಕೇಟಿಂಗ್ ಸ್ಪರ್ಧೆಯಲ್ಲಿ ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲೂಕಿನ ಸಮೃದ್ಧಿ ಸ್ಪೋರ್ಟ್ಸ್ ಅಕಾಡೆಮಿಯ ಮೂರು ವಿದ್ಯಾರ್ಥಿಗಳು 5 ಕಂಚಿನ ಪದಕ ಪಡೆಯೋದರ ಮೂಲಕ ರಾಜ್ಯಮಟ್ಟದ ಸ್ಪೀಡ್ ಸ್ಕೇಟಿಂಗ್ ಸ್ಪರ್ಧೆಗೆ ಆಯ್ಕೆಯಾಗಿದ್ದಾರೆ ವಿದ್ಯಾರ್ಥಿಗಳ ವಿವರ ಎಂಟು ವರ್ಷದ ಒಳಗಿನ 200 ಮೀಟರ್ 400 ಮೀಟರ್ ಟೆನ್ನಾಸಿಟಿ ಸ್ಕೇಟಿಂಗ್ ಸ್ಪರ್ಧೆಯಲ್ಲಿ ಎರಡರಲ್ಲೂ ಕಂಚಿನ ಪದದ, ಹದಿನಾರು ವರ್ಷದ ಒಳಗಿನ ರಂಜಿತ್ ಕುಮಾರ್ ಷಣ್ಮುಖಪ್ಪ ಎರಡು ನೂರು ಮೀಟರ್ ಹಾಗೂ 400 ಮೀಟರ್ ವಾರ್ಡ್ ಸ್ಕೇಟಿಂಗ್ ಸ್ಪರ್ಧೆಯಲ್ಲಿ ಎರಡರಲ್ಲೂ ಕಂಚಿನ ಪದಕ ಹಾಗೂ ನಿರಂಜನ್ ಕುಮಾರ್ ಷಣ್ಮುಖಪ್ಪ ನವರು ಹದಿನಾಲ್ಕು ವರ್ಷದ ಒಳಗಿನ 400 ಮೀಟರ್ ಟೆನಾಸಿಟಿ ಸ್ಕೇಟಿಂಗ್ಸ್ ಸ್ಪರ್ಧೆಯಲ್ಲಿ ಕಂಚಿನ ಪದಕ ಸಂಸ್ಥೆಗೆ ಕೀರ್ತಿ ತಂದಿದ್ದಾರೆ ಎಂದು ಸಂಸ್ಥೆಯ ಸಂಸ್ಥಾಪಕರು ಹಾಗೂ ಮುಖ್ಯ ತರಬೇತುದಾರರಾದ ಷಣ್ಮುಖಪ್ಪ ನವರು ತಿಳಿಸಿದ್ದಾರೆ.

ಸಾಧನೆ ಮಾಡಿದ ವಿದ್ಯಾರ್ಥಿಗಳಿಗೆ ಸಹ ತರಬೇತುದಾರರಾದ ಚಿರಂಜೀವಿ ಮೋಹನ್ ಕುಮಾರ್ ಸಂಸ್ಥೆಯ ಅಧ್ಯಕ್ಷರು ಪದಾಧಿಕಾರಿಗಳು ಮತ್ತು ಪಾಲಕರು ವಿದ್ಯಾರ್ಥಿಗಳಿಗೆ ಶುಭ ಹಾರೈಸಿದ್ದಾರೆ.

ಅಂಜನಾದ್ರಿ ಪೆಟ್ ಶಾಪ್

ನಿಮ್ಮ ಮುದ್ದಿನ ಸಾಕುಪ್ರಾಣಿಗಳ ಆರೈಕೆಗೆ ನಮ್ಮದು ನಿಮ್ಮ ನೆಚ್ಚಿನ ತಾಣ

ನಮ್ಮಲ್ಲಿ ಎಲ್ಲಾ ತರಹದ ಸಾಕುಪ್ರಾಣಿಗಳಿಗೆ ಬೇಕಾಗುವ ಸಮಗ್ರಿಗಳು, ಗುಣಮಟ್ಟದ ಫುಡ್ ಹಾಗೂ ಅಗತ್ಯ ಪರಿಕರಗಳು ಲಭ್ಯವಿವೆ

ನಿಮ್ಮ ಸಾಕುಪ್ರಾಣಿಗಳ ಪೋಷಣೆ ಮತ್ತು ಆರೈಕೆಗಾಗಿ ಇಂದೇ ನಮ್ಮ ಅಂಗಡಿಗೆ ಭೇಟಿ ನೀಡಿ.
ಸ್ಥಳ: ಯಲಬುರ್ಗಾ ರಸ್ತೆ, ದ್ಯಾಂಪುರ ಕ್ರಾಸ್, ಪೆಟ್ರೋಲ್ ಬಂಕ್ ಹತ್ತಿರ.
ಮೊಬೈಲ್ ಸಂಖ್ಯೆ: 7338361902
ಅಂಜನಾದ್ರಿ ಪೆಟ್ ಶಾಪ್
ನಿಮ್ಮ ಸಾಕುಪ್ರಾಣಿಗಳ ಸಂತೋಷವೇ ನಮ್ಮ ಆದ್ಯತೆ











ಈ ನಮ್ಮ ಧೃತಿ ನ್ಯೂಸ್

E NAMMA DHURTHI NEWS
KANNADA DAILY NEWS PAPER

## ಚಿಕ್ಕಮಗಳೂರು ಜಿಲ್ಲೆಯಲ್ಲಿ ಸಂಭವಿಸಿದ ಪ್ರತ್ಯೇಕ ಅಪಘಾತಗಳಲ್ಲಿ ನಾಲ್ವರು ಸಾವು



ಚಿಕ್ಕಮಗಳೂರು: ಜಿಲ್ಲೆಯ ವಿವಿಧ ಭಾಗಗಳಲ್ಲಿ ಸಂಭವಿಸಿದ ಪ್ರತ್ಯೇಕ ರಸ್ತೆ ಅಪಘಾತಗಳಲ್ಲಿ ನಾಲ್ಕು ಮಂದಿ ಮತಪಟ್ಟಿದ್ದು, ಹಲವರು ಗಾಯಗೊಂಡಿದ್ದಾರೆ. ನಗರದ ಹೊರವಲಯದಲ್ಲಿರುವ ತೇಗೂರು ಗ್ರಾಮದ ಬಳಿ ಟ್ರ್ಯಾಕ್ಟರ್‌ಗೆ ಕಟ್ಟಿದ್ದ ಹಗ್ಗ ಕುತ್ತಿಗೆಗೆ ತಗುಲಿ ಸ್ಕೂಟಿ ಸವಾರ ಮತಪಟ್ಟರೆ, ಸಖರಾಯಪಟ್ಟಣದ ಬಳಿ ಪಾದಚಾರಿಗೆ ಥಾರ್ ಕಾರು ಡಿಕ್ಕಿ ಹೊಡೆದು ಸಾವು ಸಂಭವಿಸಿದೆ. ಲಕ್ಕವಳ್ಳಿ ಸಮೀಪ ಮಳೆಯಿಂದ ಸ್ಕೂಟಿ ನಿಯಂತ್ರಣ ತಪ್ಪಿ ಬಿದ್ದ ಪರಿಣಾಮ ಮತ್ತೊಬ್ಬರು ಸೇರಿದಂತೆ ಮೂಡಿಗೆರೆಯಲ್ಲಿ ನಡೆದ ರಸ್ತೆ ಅಪಘಾತದಲ್ಲಿ ಬೈಕ್ ಸವಾರ ಮತಪಟ್ಟಿದ್ದಾರೆ.

**ತೇಗೂರು:**

ಗ್ರಾಮದ ಬಳಿ ಟ್ರ್ಯಾಕ್ಟರ್‌ಗೆ ಕಟ್ಟಿದ್ದ ಹಗ್ಗವನ್ನು ರಸ್ತೆಗೆ ಅಡ್ಡಲಾಗಿ ಎಳೆದು ಮರದ ದಿಮಿಯನ್ನು ಸಾಗಿಸುತ್ತಿದ್ದ ವೇಳೆ, ಸ್ಕೂಟಿಯಲ್ಲಿ ಬರುತ್ತಿದ್ದ ಮಹಮದ್ ಗೌಸ್ ಖಾನ್ (55) ಅವರ ಕುತ್ತಿಗೆಗೆ ಹಗ್ಗ ತಗುಲಿದ ಪರಿಣಾಮ ಸ್ಕೂಟಿ ಸಮೇತ ದಂಪತಿ ರಸ್ತೆಗೆ ಬಿದ್ದಿದ್ದು, ಗೌಸ್ ಖಾನ್ ಮತಪಟ್ಟಿದ್ದಾರೆ. ಅವರ ಪತ್ನಿ ಫಾತಿಮಾ ಬೀ ಗಾಯಗೊಂಡಿದ್ದು, ಚಿಕ್ಕಮಗಳೂರು ಎಂ.ಜಿ. ಆಸ್ಪತ್ರೆಗೆ ದಾಖಲಿಸಲಾಗಿದೆ. ಟ್ರ್ಯಾಕ್ಟರ್ ಚಾಲಕ ಮತ್ತು ಮಾಲೀಕರ ವಿರುದ್ಧ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

**ಬೈಕ್ ಸವಾರ ಸಾವು:**

ಆಟೋ ಹಾಗೂ ಬೈಕ್ ಮುಖಾಮುಖಿಯಾಗಿ ಡಿಕ್ಕಿ ಹೊಡೆದು ಸವಾರ ಪ್ರವೀಣ್ (26) ಸ್ಥಳದಲ್ಲೇ ಕೊನೆಯುಸಿರೆಳೆದಿದ್ದಾರೆ.ಮೂಡಿಗೆರೆ ತಾಲೂಕಿನ ಹಳೆಕೋಟೆ ಗ್ರಾಮದ ಮುಖ್ಯ ರಸ್ತೆಯಲ್ಲಿ ಈ ಅಪಘಾತ ಸಂಭವಿಸಿದ್ದು, ಆಟೋ ಕೂಡ ರಸ್ತೆ ಬದಿಗೆ ಪಲ್ಟಿಯಾಗಿದೆ. ಯುವಕನ ದುರ್ಮರಣದಿಂದ ಸ್ಥಳದಲ್ಲಿ ಆತಂಕದ ವಾತಾವರಣ ನಿರ್ಮಾಣವಾಗಿದ್ದು ವಿಷಯ ತಿಳಿದು ಸ್ಥಳಕ್ಕೆ ಧಾವಿಸಿದ ಮೂಡಿಗೆರೆ ಪೊಲೀಸ್ ಠಾಣೆಯ ಸಿಬ್ಬಂದಿ ಪರಿಶೀಲನೆ ನಡೆಸಿದ್ದಾರೆ.

**ಪಾದಚಾರಿ ಸಾವು:**

ಉದ್ದೇಬೋರನಹಳ್ಳಿ ಗ್ರಾಮದ ಸಮೀಪದ ಕ್ರಾಸ್ ಬಳಿ, ರಸ್ತೆಯ ಎಡಭಾಗದಲ್ಲಿ ನಡೆದುಕೊಂಡು ಹೋಗುತ್ತಿದ್ದ ಸುಮಾರು 50 ರಿಂದ 55 ವರ್ಷದ ಅಪರಿಚಿತ ವ್ಯಕ್ತಿಗೆ ಥಾರ್ ಕಾರು ಡಿಕ್ಕಿ ಹೊಡೆದಿದೆ. ತೀವ್ರ ಗಾಯಗೊಂಡ ವ್ಯಕ್ತಿ ಸ್ಥಳದಲ್ಲೇ ಮತಪಟ್ಟಿದ್ದು, ಕಾರು ನಿಲ್ಲಿಸದೆ ಚಾಲಕ ಪರಾರಿಯಾಗಿದ್ದಾನೆ. ಮತದೇಹವನ್ನು ಜಿಲ್ಲಾ ಸರ್ಕಾರಿ ಆಸ್ಪತ್ರೆಯ ಶವಾಗಾರಕ್ಕೆ ರವಾನಿಸಲಾಗಿದೆ. ಸಖರಾಯಪಟ್ಟಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಮತರ ವಾರಸುದಾರರ ಪತ್ತೆ ಕಾರ್ಯ ಮುಂದುವರಿದಿದೆ.

**ನಿಯಂತ್ರಣ ತಪ್ಪಿ ಸಾವು:**

ಲಕ್ಕವಳ್ಳಿ ಕೇರಿ ಏರಿ ಮೇಲಿನ ಟಿ.ಎಂ. ರಸ್ತೆಯಲ್ಲಿ ಈಶ್ವರಮೂರ್ತಿ ಅವರು ಮಗ ಖುಷಿ (9)ಯನ್ನು ಎಲೆಕ್ಟ್ರಿಕ್ ಸ್ಕೂಟಿಯಲ್ಲಿ ಕೂರಿಸಿಕೊಂಡು ಮನೆಗೆ ಮರಳುತ್ತಿದ್ದಾಗ, ಮಳೆಯಿಂದಾಗಿ ವಾಹನ ನಿಯಂತ್ರಣ ತಪ್ಪಿ ರಸ್ತೆಗೆ ಬಿದ್ದಿದೆ. ಘಟನೆಯಲ್ಲಿ ತಲೆಗೆ ಗಂಭೀರ ಗಾಯಗೊಂಡ ಈಶ್ವರಮೂರ್ತಿ ಅವರು ಶಿವಮೊಗ್ಗದ ಎನ್.ಎಚ್. ಆಸ್ಪತ್ರೆಯಲ್ಲಿ ಮತಪಟ್ಟಿದ್ದಾರೆ. ಬಾಲಕನ ಬಲಗಾಲಿಗೆ ಗಾಯವಾಗಿದ್ದು, ಚಿಕಿತ್ಸೆ ನೀಡಲಾಗಿದೆ. ಲಕ್ಕವಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಸಚಿವರಾದ ಬಳಿಕ ಜನರಿಂದ ದೂರವಾಗುತ್ತಿದ್ದಾರಾ ಶಿವಲಿಂಗೇಗೌಡರು



ಅರಸೀಕೆರೆ: ಕ್ಷೇತ್ರದ ಜನರ ದಶಕಗಳ ಕನಸಿನಂತೆ ಶಾಸಕ ಕೆ.ಎಂ. ಶಿವಲಿಂಗೇಗೌಡರು ರಾಜ್ಯ ಸರ್ಕಾರದಲ್ಲಿ ಸಚಿವರಾಗಿದ್ದಾರೆ. ಅಬಕಾರಿ ಇಲಾಖೆಯ ಜವಾಬ್ದಾರಿಯೊಂದಿಗೆ ಜಿಲ್ಲಾ ಉಸ್ತುವಾರಿಯ ಹೊಣೆಯನ್ನೂ ಹೊತ್ತಿರುವ ಅವರು, ಕ್ಷೇತ್ರದ ಅಭಿವೃದ್ಧಿ ಕಾರ್ಯಗಳಿಗೆ ಚಾಲನೆ ನೀಡುತ್ತಿದ್ದಾರೆ. ಆದರೆ ಶಾಸಕರಾಗಿದ್ದಾಗ ಜನರೊಂದಿಗೆ ಆತೀಯವಾಗಿ ಬೆರೆಯುತ್ತಿದ್ದ ಅವರ ನಡೆ, ಸಚಿವರಾದ ಬಳಿಕ ಬದಲಾಗಿದೆ ಎಂಬ ಮಾತುಗಳು ಅವರ ಆಪ್ತ ವಲಯದಲ್ಲೇ ಕೇಳಿಬರುತ್ತಿವೆ.ಸರ್ಕಾರಿ ಯೋಜನೆ ನೋಡಿ ಸಚಿವರಾದ ಬಳಿಕ ಕ್ಷೇತ್ರದ ಸಾಮಾನ್ಯ ಜನರು ಮಾತ್ರವಲ್ಲದೆ, ಪಕ್ಷದ ಕಾರ್ಯಕರ್ತರು ಹಾಗೂ ಮುಖಂಡರಿಗೂ ಅವರನ್ನು ಭೇಟಿಯಾಗುವುದು ಕಷ್ಟವಾಗಿದೆ ಎಂಬ ಅಸಮಾಧಾನ ವ್ಯಕ್ತವಾಗುತ್ತಿದೆ. ಶಿವಲಿಂಗೇಗೌಡರು ಸಚಿವರಾಗಬೇಕು ಎಂದು ಬಯಸಿದ್ದ ಬೆಂಬಲಿಗರು, ಈಗ ಅವರಿಂದ ಹೆಚ್ಚಿನ ಸಮಯ ಮತ್ತು ಸಂಪರ್ಕವನ್ನು ನಿರೀಕ್ಷಿಸುತ್ತಿದ್ದಾರೆ. ಕ್ಷೇತ್ರದ ಜನರ ಸಹಕಾರದಿಂದ ರಾಜಕೀಯವಾಗಿ ಬೆಳೆದಿರುವ ಅವರು, ತಮನ್ನು ಬೆಳೆಸಿದ ಕಾರ್ಯಕರ್ತರು ಹಾಗೂ ಮುಖಂಡರನ್ನು ಮರೆಯಬಾರದು ಎಂಬ ಅಭಿಪ್ರಾಯವೂ ವ್ಯಕ್ತವಾಗಿದೆ.

ಈ ಕುರಿತು ಪ್ರತಿಕ್ರಿಯಿಸಿರುವ ಮಾಜಿ ವಿಧಾನಸಭಾ ಚುನಾವಣೆಯ ಪರಾಜಿತ ಅಭ್ಯರ್ಥಿ ಎನ್.ಆರ್. ಸಂತೋಷ್, ಶಿವಲಿಂಗೇಗೌಡರು ಸಚಿವರಾಗಿರುವುದು ಕ್ಷೇತ್ರದ ನಾಗರಿಕನಾಗಿ ಹೆಮೆಯ ಸಂಗತಿ. ಅಬಕಾರಿ ಇಲಾಖೆಯ ದೊಡ್ಡ ಜವಾಬ್ದಾರಿಯಿಂದಾಗಿ ಸ್ಥಳೀಯ-ರಿಗೆ ಹೆಚ್ಚಿನ ಸಮಯ ನೀಡಲು ಸಾಧ್ಯವಾಗದಿರಬಹುದು. ಆದ್ದ-ರಿಂದ ಕಾರ್ಯಕರ್ತರು ಹಾಗೂ ಮುಖಂಡರು ಸ್ವಲ್ಪ ಸಮಯಾವಕಾಶ ನೀಡಬೇಕು ಎಂದಿದ್ದಾರೆ. ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಶಶಿಧರ್ ಮಾತನಾಡಿ, ಸಚಿವರು ಅಬಕಾರಿ ಇಲಾಖೆ ಹಾಗೂ ಜಿಲ್ಲಾ ಉಸ್ತುವಾರಿ ಜವಾಬ್ದಾ-ರಿಯೊಂದಿಗೆ ಹಾಸನಾಂಬೆ ಮಹೋತ್ಸವದ ಪೂರ್ವಸಿದ್ಧತೆಯಲ್ಲೂ ತೊಡಗಿಸಿಕೊಂಡಿದ್ದು, ಕ್ಷೇತ್ರ ಮಾತ್ರವಲ್ಲದೆ ಜಿಲ್ಲೆಯ ಸಮಗ್ರ ಅಭಿವೃದ್ಧಿಗೆ ಶ್ರಮಿಸುತ್ತಿದ್ದಾರೆ ಎಂದು ತಿಳಿಸಿದ್ದಾರೆ. ಜೆಡಿಎಸ್ ಮುಖಂಡ ಹೊಸೂರು ಗಂಗಾಧರ್ ಮಾತನಾಡಿ, ಶಿವಲಿಂಗೇಗೌಡರು ಸಚಿವ ಸ್ಥಾನಕ್ಕೇರಲು ಹಲವರ ಪ್ರೋತ್ಸಾಹ ಮತ್ತು ಸಹಕಾರ ಕಾರಣವಾಗಿದೆ. ಅವರನ್ನು ಬೆಳೆಸಿದವರನ್ನು ಸರಿಸುವ ಮನೋಭಾವ ಬೆಳೆಸಿಕೊಳ್ಳಬೇಕು ಎಂದಿದ್ದಾರೆ. ಮುಂಬರುವ ಜಿಲ್ಲಾ ಪಂಚಾಯಿತಿ, ತಾಲೂಕು ಪಂಚಾಯಿತಿ, ಗ್ರಾಮ ಪಂಚಾಯಿತಿ ಹಾಗೂ ನಗರಸಭೆ ಚುನಾವಣೆಗಳ ಹಿನ್ನೆಲೆಯಲ್ಲಿ ಕಾರ್ಯಕರ್ತರು ಮತ್ತು ಮುಖಂಡರೊಂದಿಗಿನ ಸಂಪರ್ಕವನ್ನು ಬಲಪಡಿಸಿಕೊಳ್ಳುವುದು ಅಗತ್ಯ ಎಂಬ ಅಭಿಪ್ರಾಯ ಕ್ಷೇತ್ರದಲ್ಲಿ ವ್ಯಕ್ತವಾಗುತ್ತಿದೆ.

ಈ ನಮ್ಮ ಧೃತಿ ನ್ಯೂಸ್
ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.
ಮೊ: 7353595904

# ಶಿಕ್ಷಕರ, ಪದವೀಧರ ಕ್ಷೇತ್ರಗಳ ಚುನಾವಣೆ : ಇಂದು ಮತ ಎಣಿಕೆ




ಬೆಂಗಳೂರು: ಆಡಳಿತಾರೂಢ ಕಾಂಗ್ರೆಸ್ ಹಾಗೂ ಎನ್‌ಡಿಎ ಮೈತ್ರಿಕೂಟದ ನಡುವೆ ತೀವ್ರ ಪೈಪೋಟಿಗೆ ಕಾರಣವಾಗಿದ್ದ ವಿಧಾನ ಪರಿಷತ್ತಿನ ಬೆಂಗಳೂರು ಶಿಕ್ಷಕರ, ಈಶಾನ್ಯ ಶಿಕ್ಷಕರ ಕ್ಷೇತ್ರ, ಪಶ್ಚಿಮ ಪದವೀಧರ ಹಾಗೂ ಆಗ್ನೇಯ ಪದವೀಧರ ಕ್ಷೇತ್ರಗಳ ಚುನಾವಣೆಯ ಮತ ಎಣಿಕೆ ನಾಳೆ ನಡೆಯಲಿದ್ದು, ತೀವ್ರ ಕುತೂಹಲ ಕೆರಳಿಸಿದೆ. ಸಂಜೆ ವೇಳೆಗೆ ಮತ ಎಣಿಕೆ ಪೂರ್ಣಗೊಂಡು ಫಲಿತಾಂಶ ಪ್ರಕಟಗೊಳ್ಳುವ ಸಾಧ್ಯತೆಗಳಿವೆ.

ಈ ನಾಲ್ಕು ಕ್ಷೇತ್ರಗಳಲ್ಲಿ ಒಟ್ಟು 43 ಅಭ್ಯರ್ಥಿಗಳು ಕಣದಲ್ಲಿದ್ದರು. ಕಾಂಗ್ರೆಸ್, ಬಿಜೆಪಿ, ಜೆಡಿಎಸ್ ಸೇರಿದಂತೆ ವಿವಿಧ ರಾಜಕೀಯ ಪಕ್ಷಗಳು ಹಾಗೂ ಪಕ್ಷೇತರ ಅಭ್ಯರ್ಥಿಗಳು ಸ್ಪರ್ಧೆಯಲ್ಲಿದ್ದರು. ಶಿಕ್ಷಕರು ಹಾಗೂ ಪದವೀಧರ ಮತದಾರರು ಅಭ್ಯರ್ಥಿಗಳ ಭವಿಷ್ಯವನ್ನು ಈಗಾಗಲೇ ಮತಪತ್ರದಲ್ಲಿ ಬರೆದಿದ್ದಾರೆ. ನಾಳೆ ಮತ ಎಣಿಕೆಯ ನಂತರ ಫಲಿತಾಂಶ ಪ್ರಕಟವಾಗಲಿದೆ. ಎನ್‌ಡಿಎ ಮೈತ್ರಿ ಕೂಟದ ಬಿಜೆಪಿ ಮತ್ತು ಜೆಡಿಎಸ್ ಹಾಗೂ ಆಡಳಿತಾರೂಢ ಕಾಂಗ್ರೆಸ್ ನಡುವಿನ ಪ್ರತಿಷ್ಠೆಯ ಕಣವಾಗಿದ್ದ ಈ ಚುನಾಣೆಯಲ್ಲಿ ತೀವ್ರ ಸ್ಪರ್ಧೆ ಏರ್ಪಟ್ಟಿತ್ತು. ಅಭ್ಯರ್ಥಿಗಳ ಸೋಲು-ಗೆಲುವಿನ ಲೆಕ್ಕಾಚಾರ ಕಳೆದ ಮೂರು ದಿನಗಳಿಂದ ನಡೆಯುತ್ತಿದೆ. ಬೆಂಗಳೂರು ಶಿಕ್ಷಕರ ಕ್ಷೇತ್ರದಲ್ಲಿ ಜೆಡಿಎಸ್ ಅಭ್ಯರ್ಥಿ ಸ್ಪರ್ಧಿಸಿದ್ದರೆ, ಉಳಿದ ಮೂರು ಕ್ಷೇತ್ರಗಳಲ್ಲಿ ಬಿಜೆಪಿ ಅಭ್ಯರ್ಥಿಗಳು ಸ್ಪರ್ಧಿಸಿದ್ದಾರೆ. ನಾಲ್ಕು ಕ್ಷೇತ್ರಗಳಲ್ಲಿ ಕಾಂಗ್ರೆಸ್ ಸ್ಪರ್ಧಿಸಿತ್ತು. ಪ್ರಾಶಸ್ತ್ಯದ ಮತದಾನವಾಗಿರುವುದರಿಂದ ಮತ ಎಣಿಕೆ ವಿಳಂಬವಾಗಲಿದ್ದು, ಅ. 27ರ ಬೆಳಿಗ್ಗೆ 8 ಗಂಟೆಗೆ ಮತ ಎಣಿಕೆ ಆರಂಭವಾದರೂ ಸಂಜೆ ವೇಳೆಗೆ ಚುನಾವಣಾ ಫಲಿತಾಂಶವನ್ನು ನಿರೀಕ್ಷಿಸಬಹುದಾಗಿದೆ. ಬೆಂಗಳೂರು ಶಿಕ್ಷಕರ ಹಾಗೂ ಆಗ್ನೇಯ ಪದವೀಧರ ಕ್ಷೇತ್ರಗಳ ಮತ ಎಣಿಕೆಯು ನಾಳೆ ನಗರದ ಸರ್ಕಾರಿ ಕಲಾ ಕಾಲೇಜಿನಲ್ಲಿ ನಡೆಯಲಿದೆ. ಹೀಗಾಗಿ ಕಲಾ ಕಾಲೇಜಿಗೆ ಪೊಲೀಸ್ ಬಿಗಿ ಭದ್ರತೆ ಒದಗಿಸಲಾಗಿದೆ.ನಕ್ಷೆಗಳನ್ನು ನೋಡಿ ಬೆಂಗಳೂರು ಶಿಕ್ಷಕರ ಕ್ಷೇತ್ರದಲ್ಲಿ ಶೇ.81.98, ಈಶಾನ್ಯ ಶಿಕ್ಷಕರ ಕ್ಷೇತ್ರದಲ್ಲಿ ಶೇ.86.97, ಪಶ್ಚಿಮ ಪದವೀಧರ ಕ್ಷೇತ್ರದಲ್ಲಿ ಶೇ.75.62 ಹಾಗೂ ಆಗ್ನೇಯ ಪದವೀಧರ ಕ್ಷೇತ್ರದಲ್ಲಿ ಶೇ.73.58ರಷ್ಟು ಮತದಾನವಾಗಿದೆ ಎಂದು ರಾಜ್ಯ ಮುಖ್ಯ ಚುನಾಣಾಧಿಕಾರಿಗಳ ಕಚೇರಿ ಪ್ರಕಟಣೆ ತಿಳಿಸಿದೆ. ಬೆಂಗಳೂರು ಶಿಕ್ಷಕರ ಕ್ಷೇತ್ರದಲ್ಲಿ ಕಾಂಗ್ರೆಸ್‌ನಿಂದ ಮಾಜಿ ಉಪ ಸಭಾಪತಿ ಪುಟ್ಟಣ್ಣ, ಜೆಡಿಎಸ್‌ನಿಂದ ಎ.ಪಿ.ರಂಗನಾಥ ಸೇರಿದಂತೆ ಒಟ್ಟು ಆರು ಅಭ್ಯರ್ಥಿಗಳು ಸ್ಪರ್ಧಿಸಿದ್ದರು.

ಈಶಾನ್ಯ ಶಿಕ್ಷಕರ ಕ್ಷೇತ್ರದಲ್ಲಿ ಕಾಂಗ್ರೆಸ್‌ನಿಂದ ಶರಣಪ್ಪ ಮಟ್ಟೂರು, ಬಿಜೆಪಿಯಿಂದ ಶಶೀಲ್ ಜಿ.ನಮೋಶಿ ಸೇ-ರಿದಂತೆ ಒಟ್ಟು 13 ಅಭ್ಯರ್ಥಿಗಳು ಸ್ಪರ್ಧಿಸಿದ್ದರು. ಆಗ್ನೇಯ ಪದವೀಧರ ಕ್ಷೇತ್ರದಲ್ಲಿ ಕಾಂಗ್ರೆಸ್‌ನಿಂದ ಶಶಿ ಹುಲಿಕುಂಟೆಮಠ್, ಬಿಜೆಪಿಯಿಂದ ಕೆ.ಎಂ.ಸುರೇಶ ಅವರು ಸೇ-ರಿದಂತೆ 10 ಅಭ್ಯರ್ಥಿಗಳು ಹಾಗೂ ಪಶ್ಚಿಮ ಪದವೀಧರ ಕ್ಷೇತ್ರದಲ್ಲಿ ಕಾಂಗ್ರೆಸ್‌ನಿಂದ ಮೋಹನ ಲಿಂಬಿಕಾಯಿ, ಬಿಜೆಪಿಯಿಂದ ಸಂಕನೂರ ಎಸ್.ವಿ. ಸೇರಿದಂತೆ ಒಟ್ಟು 14 ಅಭ್ಯರ್ಥಿಗಳು ಚುನಾವಣಾ ಕಣದಲ್ಲಿದ್ದರು.

ವಿಧಾನ ಪರಿಷತ್ ಸದಸ್ಯರಾದ ಚಿದಾನಂದ ಎಂ.ಗೌಡ, ಸಂಕನೂರ ಎಸ್.ವಿ., ಶಶೀಲ್ ಜಿ.ನಮೋಶಿ, ಪುಟ್ಟಣ್ಣ ಅವರು ನವೆಂಬರ್ 11ರಂದು ವಿಧಾನ ಪರಿಷತ್ ಸದಸ್ಯ ಸ್ಥಾನದಿಂದ ನಿವೃತ್ತಿಯಾಗಲಿದ್ದು, ನಿವೃತ್ತಿಯಿಂದ ತೆರವಾಗುವ ಸ್ಥಾನಗಳಿಗೆ ಚುನಾವಣಾ ಆಯೋಗ ಚುನಾವಣೆ ನಡೆಸುತ್ತಿದೆ. ಅಕ್ಟೋಬರ್ 31ರೊಳಗೆ ಚುನಾವಣಾ ಪ್ರಕ್ರಿಯೆ ಮುಕ್ತಾಯವಾಗಲಿದ್ದು, ಚುನಾವಣಾ ನೀತಿ ಸಂಹಿತೆಯು ಅಂತ್ಯಗೊಳ್ಳಲಿದೆ.

# ರಾಜ್ಯ ಬಿಜೆಪಿಯಲ್ಲಿ ನಾಯಕತ್ವ ಬದಲಾವಣೆ ಚರ್ಚೆ



ಬೆಂಗಳೂರು: ಮುಂಬರುವ 2027ರ ಸ್ಥಳೀಯ ಸಂಸ್ಥೆಗಳ ಚುನಾವಣೆ ಮತ್ತು 2028ರ ವಿಧಾನಸಭಾ ಚುನಾವಣೆಗಳು ಸಮೀಪಿಸುತ್ತಿರುವ ಹಿನ್ನೆಲೆಯಲ್ಲಿ ರಾಜ್ಯ ಬಿಜೆಪಿಯಲ್ಲಿ ನಾಯಕತ್ವದ ಪ್ರಶ್ನೆ ಮತ್ತೆ ಮುನ್ನೆಲೆಗೆ ಬಂದಿದೆ.

ಹಾಲಿ ರಾಜ್ಯಾಧ್ಯಕ್ಷ ಬಿ.ವೈ.ವಿ-ಜಯೇಂದ್ರ ಅವರನ್ನೇ ಮುಂದುವ-ರಿಸಬೇಕೇ ಅಥವಾ ಹೊಸಬರಿಗೆ ಪಕ್ಷದ ಚುಕ್ಕಾಣಿ ನೀಡಬೇಕೇ ಎಂಬ ಚರ್ಚೆ ಪಕ್ಷದ ಆಂತರಿಕ ವಲಯದಲ್ಲಿ ತೀವ್ರಗೊಂಡಿದೆ. ಇದರೊಂದಿಗೆ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರ ಕುಟುಂಬದ ಪ್ರಭಾವ, ಹಿರಿಯ ನಾಯಕರ ಅಸಮಾಧಾನ ಮತ್ತು ಪಕ್ಷದ ಸಂಘಟನಾತಕ ಬಲವರ್ಧನೆಯ ವಿಚಾರಗಳೂ ಮಹತ್ವ ಪಡೆದುಕೊಂಡಿವೆ. ವಿಜಯೇಂದ್ರ ಅವರ ಮೂರು ವರ್ಷಗಳ ಅಧಿಕಾರಾವಧಿ ಪೂರ್ಣಗೊಳ್ಳುತ್ತಿರುವ ಹಿನ್ನೆಲೆಯಲ್ಲಿ ನವೆಂಬರ್ ತಿಂಗಳು ನಿರ್ಣಾಯಕವಾಗುವ ಸಾಧ್ಯತೆಯಿದೆ. ರಾಜ್ಯದಲ್ಲಿ ಮುಂಬರುವ ಚುನಾವಣೆಗಳನ್ನು ಗಮನದಲ್ಲಿಟ್ಟುಕೊಂಡು ಪಕ್ಷದ ರಾಷ್ಟ್ರೀಯ ನಾಯಕತ್ವವು ಅವರ ಅಧಿಕಾರಾವಧಿಯನ್ನು ವಿಸ್ತರಿಸುವುದೇ ಅಥವಾ ಪರ್ಯಾಯ ನಾಯಕನನ್ನು ಆಯ್ಕೆ ಮಾಡುವುದೇ ಎಂಬ ಬಗ್ಗೆ ತೀರ್ಮಾನ ಕೈಗೊಳ್ಳಬೇಕಿದೆ. ವಿಜಯೇಂದ್ರ ಅವರ ಬೆಂಬಲಿಗರು, ಸೆಪ್ಟೆಂಬರ್‌ನಲ್ಲಿ ನಡೆದ ಸುಮಾರು 170 ಕಿ.ಮೀ. ಬಳ್ಳಾರಿ ಪಾದಯಾತ್ರೆಯನ್ನು ಅವರ ನಾಯಕತ್ವದ ಪ್ರಮುಖ ಸಾಧನೆಯಾಗಿ ಮುಂದಿಡುತ್ತಿದ್ದಾರೆ. ಈ ಪಾದಯಾತ್ರೆಯು ಪಕ್ಷದ ಹಲವು ಹಿರಿಯ ನಾಯಕರನ್ನು ಒಂದೇ ವೇದಿಕೆಗೆ ಕರೆತರುವುದರ ಜತೆಗೆ, ಕಾಂಗ್ರೆಸ್ ಸರ್ಕಾರದ ವಿರುದ್ಧ ಭ್ರಷ್ಟಾಚಾರ ಮತ್ತು ಆಡಳಿತ ವೈಫಲ್ಯದ ಆರೋಪಗಳನ್ನು ಮುಂದಿಟ್ಟುಕೊಂಡು ಹೋರಾಟ ನಡೆಸಲು ಬಿಜೆಪಿಗೆ ಅವಕಾಶ ಕಲ್ಪಿಸಿತು ಎಂಬುದು ಅವರ ವಾದ. ಆದರೆ ಪಾದಯಾತ್ರೆಯಂತಹ ಕಾರ್ಯಕ್ರಮಗಳಲ್ಲಿ ನಾಯಕರು ಒಟ್ಟಾಗಿ ಕಾಣಿಸಿಕೊಳ್ಳುವುದು ಮಾತ್ರ ಪಕ್ಷದ ಆಂತರಿಕ ಭಿನ್ನಾಭಿಪ್ರಾಯಗಳು ಬಗೆಹರಿದಿವೆ ಎಂಬುದಕ್ಕೆ ಸಾಕ್ಷಿಯಲ್ಲ ಎಂಬ ಅಭಿಪ್ರಾಯವೂ ಪಕ್ಷದೊಳಗಿದೆ. ವಿಜಯೇಂದ್ರ ಅವರ ನಾಯಕತ್ವದಲ್ಲಿ ಪಕ್ಷದ ಸಂಘಟನೆ ನಿರೀಕ್ಷಿತ ಮಟ್ಟದಲ್ಲಿ ಬಲಗೊಂಡಿಲ್ಲ. ಕಾರ್ಯಕರ್ತರಲ್ಲಿ ಹೊಸ ಹುರುಪು ಮೂಡಿಸುವ ಮತ್ತು ಪಕ್ಷದ ವಿವಿಧ ಬಣಗಳನ್ನು ಒಗ್ಗೂಡಿಸುವ ವಿಚಾರದಲ್ಲಿ ಗಮನಾರ್ಹ ಪ್ರಗತಿ ಕಂಡುಬಂದಿಲ್ಲ ಎಂಬ ಟೀಕೆಗಳು ಕೇಳಿಬರುತ್ತಿವೆ.

**ಯತ್ನಾಳ್ ಭೇಟಿ: ಸಂಧಾನದ ಮುನ್ಸೂಚನೆಯೇ**

ವಿಜಯೇಂದ್ರ ಅವರ ತೀವ್ರ ಟೀಕಾಕಾರರಾಗಿದ್ದ, ಪಕ್ಷದಿಂದ ಉಚ್ಚಾಟಿ-ತರಾಗಿರುವ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಅವರೊಂದಿಗಿನ ಇತ್ತೀಚಿನ ಭೇಟಿ ರಾಜಕೀಯ ವಲಯದಲ್ಲಿ ಕುತೂಹಲ ಮೂಡಿಸಿದೆ. ಈ ಬೆಳವಣಿಗೆಯನ್ನು ಇಬ್ಬರ ನಡುವಿನ ಸಂಬಂಧ ಸುಧಾರಿಸುವ ಸಾಧ್ಯತೆಯ ಸೂಚನೆಯಾಗಿ ಕೆಲವರು ಪರಿಗಣಿಸಿದರೆ, ಇದನ್ನು ಶಾಶ್ವತ ರಾಜಿ ಎಂದು ಪರಿಗಣಿಸಲು ಸಾಧ್ಯವಿಲ್ಲ ಎಂಬ ಅಭಿಪ್ರಾಯವೂ ಇದೆ. ಕರ್ನಾಟಕದಲ್ಲಿ ನಾಯಕತ್ವ ಬದಲಾವಣೆಯಾದರೆ ಸಂಧಾನ ಮಾತುಕತೆಗಳಿಗೆ ಅವಕಾಶ ಸಿಗಬಹುದು ಎಂಬ ಯತ್ನಾಳ್ ಅವರ ಹೇಳಿಕೆ, ರಾಜ್ಯ ಬಿಜೆಪಿಯ ನಾಯಕತ್ವದ ವಿಚಾರ ಇನ್ನೂ ಬಗೆಹರಿದಿಲ್ಲ ಎಂಬುದನ್ನು ಸೂಚಿಸುತ್ತದೆ. ಯತ್ನಾಳ್ ಮಾತ್ರವಲ್ಲದೆ, ಪಕ್ಷದಲ್ಲಿ ಕಡೆಗಣಿಸಲ್ಪಟ್ಟಿದ್ದಾರೆ ಎನ್ನಲಾಗುತ್ತಿರುವ ಹಿರಿಯ ನಾಯಕರನ್ನು ಮತ್ತೆ ವಿಶ್ವಾಸಕ್ಕೆ ತೆಗೆದುಕೊಳ್ಳುವುದು ಬಿಜೆಪಿಗೆ ಸವಾಲಾಗಿದೆ. ಈ ಅಸಮಾಧಾನಗಳನ್ನು ನಿವಾರಿಸದೆ ಮುಂದಿನ ಚುನಾವಣೆಗಳಿಗೆ ಮುನ್ನ ಸಾಗಿದರೆ, ಪಕ್ಷದ ಆಂತ-ರಿಕ ಭಿನ್ನಾಭಿಪ್ರಾಯಗಳು ಚುನಾವಣಾ ಫಲಿತಾಂಶದ ಮೇಲೂ ಪರಿಣಾಮ ಬೀರಬಹುದು ಎಂಬ ಆತಂಕವಿದೆ.

**ರೇಸ್‌ನಲ್ಲಿ ಸೋಮಣ್ಣ, ಬೆಲ್ಲದ್, ನಿರಾಣಿ ಹೆಸರು**

ವಿಜಯೇಂದ್ರ ಅವರ ಬದಲಿಗೆ ಹೊಸ ಅಧ್ಯಕ್ಷರನ್ನು ನೇಮಿಸುವ ಸಾಧ್ಯತೆಯ ಹಿನ್ನೆಲೆಯಲ್ಲಿ ಹಲವು ನಾಯಕರ ಹೆಸರುಗಳು ಚರ್ಚೆಯಲ್ಲಿವೆ. ಕೇಂದ್ರ ಸಚಿವ ವಿ. ಸೋಮಣ್ಣ, ವಿಧಾನಸಭೆಯ ವಿರೋಧ ಪಕ್ಷದ ಉಪನಾಯಕ ಅರವಿಂದ ಬೆಲ್ಲದ್ ಮತ್ತು ಮಾಜಿ ಸಚಿವ ಮುರುಗೇಶ್ ನಿರಾಣಿ ಪ್ರಮುಖ ಸಂಭಾವ್ಯ ಅಭ್ಯರ್ಥಿಗಳೆಂದು ಹೇಳಲಾಗುತ್ತಿದೆ. ವಿ. ಸೋಮಣ್ಣ ವಿವಿಧ ಬಣಗಳೊಂದಿಗೆ ಸಂಬಂಧ ಹೊಂದಿರುವ ಅನುಭವ ಮತ್ತು ಜೆಡಿಎಸ್‌ನೊಂದಿಗೆ ಸಮನ್ವಯ ಸಾಧಿಸುವ ಸಾಮರ್ಥ್ಯ ಅವರ ಪರವಾಗಿರುವ ಅಂಶಗಳೆಂದು ಪರಿಗಣಿಸಲಾಗಿದೆ. ಆದ-'ರೆ, ಅವರ ವಯಸ್ಸು ನಾಯಕತ್ವ ಆಯ್ಕೆಯಲ್ಲಿ ಚರ್ಚೆಗೆ ಕಾರಣವಾಗಬಹುದು. ಅರವಿಂದ ಬೆಲ್ಲದ್:

57 ವರ್ಷದ ಬೆಲ್ಲದ್ ಅವರಿಗೆ ಹೊಸ ತಲೆಮಾರಿನ ನಾಯಕತ್ವದ ಪ್ರತಿನಿಧಿಯಾಗಿ ಹೊರಹೊಮುವ ಅವಕಾಶವಿದೆ ಎಂಬ ವಿಶ್ಲೇಷಣೆ ಇದೆ. ಪಂಚಮಸಾಲಿ ಲಿಂಗಾಯತ ಸಮುದಾಯದ ಹಿನ್ನೆಲೆ ಮತ್ತು ಸಂಘಟನಾತಕವಾಗಿ ಹೊಸ ತಂಡವನ್ನು ಕಟ್ಟುವ ಸಾಧ್ಯತೆ ಅವರ ಪರವಾದ ಅಂಶಗಳಾಗಿವೆ. ಮುರುಗೇಶ್ ನಿರಾಣಿ: ವಿವಿಧ ಸರ್ಕಾರಗಳಲ್ಲಿ ಸಚಿವರಾಗಿ ಕಾರ್ಯನಿರ್ವಹಿಸಿದ ಅನುಭವ ಹೊಂದಿರುವ ನಿರಾಣಿ ಅವರ ಹೆಸರೂ ಚರ್ಚೆಯಲ್ಲಿದೆ. ಆದ-'ರೆ, ಅವರ ವ್ಯವಹಾರಿಕ ಹಿತಾಸಕ್ತಿಗಳು ಮತ್ತು ಆರ್ಥಿಕ ಸವಾಲುಗಳ ಕುರಿತ ಚರ್ಚೆಗಳು ಅವರ ಆಯ್ಕೆಯ ಸಾಧ್ಯತೆಯ ಮೇಲೆ ಪರಿಣಾಮ ಬೀರಬಹುದು ಎಂಬ ಅಭಿಪ್ರಾಯಗಳಿವೆ. ಆರ್. ಅಶೋಕ್ ಭೇಟಿಯೂ ಕುತೂಹಲಕ್ಕೆ ಕಾರಣ ವಿಧಾನಸಭೆಯ ವಿರೋಧ ಪಕ್ಷದ ನಾಯಕ ಆರ್. ಅಶೋಕ್ ಅವರು ಕಳೆದ ವಾರ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರನ್ನು ಭೇಟಿ ಮಾಡಿ, ರಾಜ್ಯದ ರಾಜಕೀಯ ಬೆಳವಣಿಗೆಗಳು ಮತ್ತು ಸ್ಟಿಂಗ್ ಆಪರೇಷನ್‌ಟಿ ಪ್ರಕರಣದ ಕುರಿತು ಮಾಹಿತಿ ನೀಡಿದ್ದಾರೆ ಎಂದು ವರದಿಯಾಗಿದೆ. ತಮ ಅಧಿಕಾರಾವಧಿ ವಿಸ್ತರಣೆಯ ವಿಚಾರವನ್ನೂ ಅವರು ರಾಷ್ಟ್ರೀಯ ನಾಯಕತ್ವದ ಗಮನಕ್ಕೆ ತಂದಿದ್ದಾರೆ ಎನ್ನಲಾಗಿದೆ. ಇದೇ ವೇಳೆ, ವಿಧಾನಸಭೆಯ ವಿರೋಧ ಪಕ್ಷದ ನಾಯಕನ ಸ್ಥಾನಕ್ಕೂ ಪರ್ಯಾಯ ಹೆಸರುಗಳ ಚರ್ಚೆ ನಡೆಯುತ್ತಿದೆ. ಮಾಜಿ ಸಚಿವ ವಿ. ಸುನಿಲ್‌ಕುಮಾರ್ ಸೇ-ರಿದಂತೆ ಕೆಲವು ನಾಯಕರು ಈ ಹುದ್ದೆಯ ಮೇಲೆ ಆಸಕ್ತಿ ಹೊಂದಿದ್ದಾರೆ ಎಂಬ ಮಾತುಗಳು ಕೇಳಿಬರುತ್ತಿವೆ.

# ಬೆಂಗಳೂರಲ್ಲಿ ಸುರಂಗ ಮಾರ್ಗ ನಿರ್ಮಾಣಕ್ಕೆ ಎನ್‌ಜಿಟಿ ತಡೆ




ಬೆಂಗಳೂರು: ಹೆಬ್ಬಾಳ ಜಂಕ್ಷನ್‌ನಿಂದ ಮೇಖ್ರಿ ವೃತ್ತದವರೆಗೆ ನಿರ್ಮಿಸಲು ಉದ್ದೇಶಿಸಲಾಗಿದ್ದ ಕಿರು ಸುರಂಗ ಮಾರ್ಗ ನಿರ್ಮಾಣಕ್ಕೆ ತಾತ್ಕಾಲಿಕ ತಡೆ ನೀಡಲಾಗಿದೆ.ಈ ಕಾಮಗಾರಿಗೆ ಸಂಬಂಧಿಸಿದಂತೆ ಮರಗಳ ತೆರವು ಕಾರ್ಯಕ್ಕೆ ರಾಷ್ಟ್ರೀಯ ಹಸಿರು ನ್ಯಾಯಾಧಿಕರಣದ (ಎನ್‌ಜಿಟಿ) ದಕ್ಷಿಣ ವಲಯ ಪೀಠ ತಡೆ ನೀಡಿದೆ.

ಯೋಜನೆಗೆ ಸಂಬಂಧಿಸಿದ ಅರ್ಜಿ ಇತ್ಯರ್ಥವಾಗುವವರೆಗೆ ಯಾವುದೇ ಮರಗಳನ್ನು ತೆರವುಗೊಳಿಸದಂತೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ (ಬಿಡಿಎ) ಅಧಿಕಾರಿಗಳಿಗೆ ಸೂಚಿಸಿದೆ. ಇದರಿಂದ ಸುರಂಗ ಮಾರ್ಗ ಯೋಜನೆಗೆ ಪರಿಸರ ಸಂಬಂಧಿತ ಕಾನೂನು ಅಡ್ಡಿ ಎದುರಾದಂತಾಗಿದೆ.ನಕ್ಷೆಗಳನ್ನು ನೋಡಿ ಚೆನ್ನೈನಲ್ಲಿರುವ ಎನ್‌ಜಿಟಿಯ ದಕ್ಷಿಣ ವಲಯ ಪೀಠವು ಅಕ್ಟೋಬರ್ 16ರಂದು ಮಂಗಳೂ-ರಿನ ಪರಿಸರ ಸಂಘಟನೆಯೊಂದು ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿ ಈ ಮಧ್ಯಂತರ ಆದೇಶ ನೀಡಿದೆ. ಪ್ರಕರಣದ ಮುಂದಿನ ವಿಚಾರಣೆ ಡಿಸೆಂಬರ್ 15ರಂದು ನಡೆಯಲಿದೆ. ಹೆಬ್ಬಾಳ ಜಂಕ್ಷನ್‌ನಿಂದ ಮೇಖ್ರಿ ವೃತ್ತದವರೆಗೆ ಸುಮಾರು 2.3 ಕಿ.ಮೀ. ಉದ್ದದ ಸುರಂಗ ಮಾರ್ಗ ನಿರ್ಮಿಸಲು ಬಿಡಿಎ ಉದ್ದೇಶಿಸಿದ್ದು, ಇದಕ್ಕಾಗಿ 70ಕ್ಕೂ ಹೆಚ್ಚು ಪ್ರಭೇದಗಳಿಗೆ ಸೇರಿದ ಒಟ್ಟು 1,128 ಮರಗಳನ್ನು ತೆರವುಗೊಳಿಸುವ ಪ್ರಸ್ತಾವವಿದೆ. ಆದರೆ, ಇಷ್ಟೊಂದು ಸಂಖ್ಯೆಯ ಮರಗಳನ್ನು ಕಡಿಯುವುದರಿಂದ ಪರಿಸರದ ಮೇಲೆ ಗಂಭೀರ ಪರಿಣಾಮ ಉಂಟಾಗಲಿದೆ ಎಂಬ ಆತಂಕ ವ್ಯಕ್ತವಾಗಿದೆ. ಹೆಬ್ಬಾಳ ಕೆರೆ, ಅದರ ಸುತ್ತಮುತ್ತಲಿನ ಜೌಗು ಪ್ರದೇಶಗಳು, ಅಂತರ್ಜಲ ಮಟ್ಟ ಹಾಗೂ ನೈಸರ್ಗಿಕ ನೀರು ಹರಿಯುವ ವ್ಯವಸ್ಥೆಗೆ ಯೋಜನೆಯಿಂದ ಹಾನಿಯಾಗುವ ಸಾಧ್ಯತೆಯಿದೆ ಎಂದು ಅರ್ಜಿದಾರರು ನ್ಯಾಯಾಧಿಕರಣದ ಗಮನಕ್ಕೆ ತಂದಿದ್ದಾರೆ. ಪರಿಸರದ ಮೇಲಿನ ಪರಿಣಾಮಗಳನ್ನು ಸಮರ್ಪಕವಾಗಿ ಪರಿಶೀಲಿಸದೆ ಮರಗಳ ತೆರವಿಗೆ ಅವಕಾಶ ನೀಡಬಾರದು ಎಂಬುದು ಅರ್ಜಿದಾರರ ವಾದವಾಗಿದೆ. 1,600 ಆಕ್ಷೇಪಣೆ ಸಲ್ಲಿಕೆ; ಸುರಂಗ ಮಾರ್ಗ ನಿರ್ಮಾಣಕ್ಕಾಗಿ ಮರಗಳನ್ನು ಕಡಿಯುವ ಬಿಡಿಎ ಪ್ರಸ್ತಾವಕ್ಕೆ ಸಾರ್ವಜನಿಕ-ರಿಂದಲೂ ವ್ಯಾಪಕ ವಿರೋಧ ವ್ಯಕ್ತವಾಗಿದೆ. ಈವರೆಗೆ ಸುಮಾರು 1,600 ಆಕ್ಷೇಪಣೆಗಳು ಸಲ್ಲಿಕೆಯಾಗಿವೆ ಎಂದು ತಿಳಿದುಬಂದಿದೆ.

ಮರಗಳ ತೆರವು ವಿಚಾರವನ್ನು ಪರಿಶೀಲಿಸಲು ರಚಿಸಲಾಗಿರುವ ಮರ ತಜ್ಞರ ಸಮಿತಿಯು ಸಾರ್ವಜನಿಕರ ಆಕ್ಷೇಪಣೆಗಳನ್ನು ಪರಿಗಣಿಸಲಿದೆ. ಜತೆಗೆ, ಯೋಜನಾ ಪ್ರದೇಶದಲ್ಲಿ ಸ್ಥಳ ಪರಿಶೀಲನೆ ನಡೆಸಿ ಎಷ್ಟು ಮರಗಳನ್ನು ಉಳಿಸಬಹುದು, ಎಷ್ಟು ಮರಗಳನ್ನು ಸ್ಥಳಾಂತರಿಸಬಹುದು ಹಾಗೂ ಅನಿವಾರ್ಯವಾಗಿ ಎಷ್ಟು ಮರಗಳನ್ನು ಕಡಿಯಬೇಕಾಗಬಹುದು ಎಂಬ ಬಗ್ಗೆ ನಿರ್ಧಾರ ಕೈಗೊಳ್ಳಲಿದೆ. ಒಂದೆಡೆ ಸಂಚಾರ ದಟ್ಟಣೆ ಕಡಿಮೆ ಮಾಡುವ ಉದ್ದೇಶದಿಂದ ಸುರಂಗ ಮಾರ್ಗ ನಿರ್ಮಾಣಕ್ಕೆ ಯೋಜನೆ ರೂಪಿಸಲಾಗಿದ್ದರೆ, ಮತ್ತೊಂದೆಡೆ ಮರಗಳ ಸಂರಕ್ಷಣೆ ಮತ್ತು ಜಲಮೂಲಗಳ ರಕ್ಷಣೆಯ ಪ್ರಶ್ನೆಗಳು ಮುನ್ನೆಲೆಗೆ ಬಂದಿವೆ. ಎನ್‌ಜಿ-ಟಿಯ ಮಧ್ಯಂತರ ಆದೇಶದಿಂದ ಸದ್ಯಕ್ಕೆ ಮರ ತೆರವು ಕಾರ್ಯಕ್ಕೆ ತಡೆ ಬಿದ್ದಿದ್ದು, ಮುಂದಿನ ವಿಚಾರಣೆಯಲ್ಲಿ ನ್ಯಾಯಾಧಿಕರಣ ಕೈಗೊಳ್ಳುವ ನಿರ್ಧಾರ ಮಹತ್ವ ಪಡೆದುಕೊಂಡಿದೆ.

# ಸಾಷ್ಟಾಂಗ ನಮಸ್ಕಾರ ಮಾಡುವ ವಿಧಾನ

ಮೊದಲು ಎರಡೂ ಕೈಗಳನ್ನು ಎದೆಯ ಸಮೀಪ ಜೋಡಿಸಬೇಕು (ನಮಸ್ಕಾರದ ಮುದ್ರೆಯಂತೆ). ನಂತರ ಸೊಂಟ ಬಗ್ಗಿಸಬೇಕು, ನಂತರ ಎರಡೂ ಅಂಗೈಗಳನ್ನು ನೆಲದ ಮೇಲಿಡಬೇಕು, ಮೊದಲು ಬಲಗಾಲನ್ನು, ಆಮೇಲೆ ಎಡಗಾಲನ್ನು ಹಿಂದಕ್ಕೆ ಸರಿಸಿ ಎರಡೂ ಕಾಲುಗಳನ್ನು ನೇರವಾಗಿ ಉದ್ದ ಮಾಡಬೇಕು.

ಕೈಗಳನ್ನು ಮಡಚಿ ತಲೆ, ಎದೆ, ಅಂಗೈ, ಮೊಣಕಾಲು ಮತ್ತು ಕಾಲುಗಳ ಬೆರಳುಗಳು ನೆಲಕ್ಕೆ ತಾಗುವಂತೆ ಮಲಗಬೇಕು ಹಾಗೂ ಕಣ್ಣುಗಳನ್ನು ಮುಚ್ಚಿಕೊಳ್ಳಬೇಕು.
ಮನಸ್ಸಿನಿಂದ ನಮಸ್ಕರಿಸಬೇಕು ಮತ್ತು ಬಾಯಿಯಿಂದ 'ನಮಸ್ಕಾರ' ಎಂದು ಹೇಳಬೇಕು.
ಎದ್ದುನಿಂತು ಎರಡೂ ಕೈಗಳನ್ನು ಅನಾಹತಚಕ್ರದ ಬಳಿ (ಎದೆಯ ಮೇಲೆ) ಜೋಡಿಸಿ ಶರಣಾಗತ ಭಾವದಿಂದ ನಮಸ್ಕಾರ ಮಾಡಬೇಕು.

ನಮಸ್ಕಾರ ಎನ್ನುವ ಪದವು ಸಂಸ್ಕೃತ ಭಾಷೆಯ ಒಂದು ಪದ. ಈ ಪದವನ್ನು ಬಿಡಿಸಿದಾಗ ನಮಸ್ । ಕಾರ ಎನ್ನುವ ಎರಡು ಬೇರೆ ಬೇರೆ ಪದಗಳು ದೊರೆಯುತ್ತವೆ.
ಇದು ಣಮು ಪ್ರಹ್ವತ್ವೇ ಶಬ್ದೇ ಚ ಎನ್ನುವ ಧಾತುವಿನಿಂದ ಉತ್ಪನ್ನವಾಗಿದೆ. ನಮಸ್ ಎಂದರೆ ಪ್ರಹ್ವತೆ. ಧಾತುವಿನಲ್ಲಿರುವ ಪದಗಳ ಅರ್ಥವನ್ನು ನೋಡಿದಾಗ ನಾವು ನಮಸ್ಕಾರ ಎನ್ನುವ ಪ್ರಕ್ರಿಯೆಯನ್ನು ಮಾಡುವಾಗ ನಮ್ಮ ದೇಹವನ್ನು ಬಾಗಿಸಿರಬೇಕು ಮತ್ತು ಮನಸ್ಸೂ ಸಹ ಬಾಗಿರಬೇಕು ಎನ್ನುವ ಅರ್ಥ ಸಿಗುತ್ತದೆ. ಅಂದರೆ ನಮಸ್ಕಾರವನ್ನು ಮಾಡುವಾಗ ನಮ್ಮ ದೇಹಬಾಗಿದ್ದರೆ ಮಾತ್ರ ಸಾಲದು. ದೇವದೇವನ ಮುಂದೆ ನಮ್ಮ ಮನಸ್ಸೂ ಬಾಗಿದ್ದು, ಅವನ ಮಹಿಮೆಗಳು ಶಬ್ದರೂಪ ಸ್ತೋತ್ರದ ಮೂಲಕ ಹೊರಬರುತ್ತಿರಬೇಕು.

ಇದೇ ಮಾತನ್ನು ಶ್ರೀಮಜ್ಜಯತೀರ್ಥರು ತಮ್ಮ ಸುಧಾಗ್ರಂಥದಲ್ಲಿ ಮನೋವೃತ್ತೇಃ ತತ್ಪ್ರವಣತಾ ಹಿ ವಂದನಮ್ ಎಂದಿದ್ದಾರೆ.
ಹೀಗೆ ನಮಸ್ಕಾರ ಮಾಡುವುದು ಮನಸ್ಸಿನಿಂದ, ಕೇವಲ ಅಡ್ಡಬೀಳುವುದೇ ನಮಸ್ಕಾರವಲ್ಲ. ನಾವು ಪೂಜಾವಸಾನದಲ್ಲಿ ಹೇಳುವ ನಾಹಂ ಕರ್ತಾ ಹರಿ ಕರ್ತಾ ತತ್ಪೂಜಾ ಕರ್ಮ ಚಾಖಿಲಮ್ ಎನ್ನುವ ಮಾತಿನಂತೆ ಯಾವುದೇ ಕಾರ್ಯ ನಮ್ಮಿಂದಾದರೆ ನಿಜವಾಗಿಯೂ ಆ ಕಾರ್ಯ ನಮ್ಮಿಂದಾದುದಲ್ಲ. ಭಗವಂತನಿಂದಲೇ ಆದದ್ದು ಎನ್ನುವ ಭಾವನೆಯೇ ನಮಸ್ಕಾರ. ಅಲ್ಲದೇ! ನಮಸ್ಕಾರವನ್ನು ಮಾಡಿದಾಗ ನಮ್ಮ ದೇಹದ ಭಾರ ವನ್ನು ಭೂವರಾಹನ ಮೇಲೆ ಹಾಕಿ ಆತ್ಮವನ್ನು ನಿವೇದಿಸಬೇಕಾದರೆ ನಾಹಂ ಕರ್ತಾ ಎನ್ನುವ ಅನುಸಂಧಾನವಿರಲೇಬೇಕು. ಇಲ್ಲದಿದ್ದಲ್ಲಿ ದೇಹವನ್ನು ಮಾತ್ರ ಭೂಮಿಯ



ಮೇಲೆ ಬೀಳಿಸಿದಂತಾ ಗುತ್ತದೆ. ಆತ್ಮನಿವೇದನೆ ಮಾಡಿದಂತಾಗುವುದಿಲ್ಲ.

ಶ್ರವಣಂ ಕೀರ್ತನಂ ವಿಷ್ಣೋಃ ಸ್ಮರಣಂ ಪಾದಸೇವನಮ್ ।
ಅರ್ಚನಂ ವಂದನಂ ದಾಸ್ಯಂ ಸಖ್ಯಂ ಆತ್ಮನಿವೇದನಮ್ ॥

ಎನ್ನುವ ನವವಿಧ ಭಕ್ತಿ ಯಲ್ಲಿ ಆತ್ಮನಿವೇದನೆ ಸೇರಿದಂತೆ ವಂದನವೂ ಸೇರಿದೆ. ಈ ವಂದನದ ಮೂಲಕ ಭಗವಂತನಲ್ಲಿ ಸ್ನೇಹವನ್ನು ಸಂಪಾದಿಸಿ, ಅವನ ದಾಸರಾಗಿ, ಅವನ ಉತ್ಕರ್ಷವನ್ನು ಒಪ್ಪಿಕೊಂಡು ಅವನಿಗೆ ನಮ್ಮ ಆತ್ಮನಿವೇದನೆಯನ್ನು ಮಾಡುವುದರ ಮೂಲಕ ನಮ್ಮ ಒಳಿತು-ಕೆಡಕುಗಳಿಗೆ ಆ ಭಗವಂತನೇ ಕಾರಣ ಎನ್ನುವ ಅನುಸಂಧಾನದ ಮೂಲಕ ಮನಸ್ಸನ್ನು ನಮ್ರವಾಗಿಸುವುದೇ ನಮಸ್ಕಾರದ ಪ್ರಕ್ರಿಯೆ.

**ನಮಸ್ಕಾರದಲ್ಲಿ ಎಷ್ಟು ವಿಧಗಳು:**

ನಮಸ್ಕಾರವು ಕಾಯಿಕ, ವಾಚಿಕ, ಮಾನಸಿಕ ಎಂದು ಮೂರು ವಿಧವಾಗಿದೆ. ದೇಹದಿಂದ ಮಾಡುವ ನಮಸ್ಕಾರವು ಕಾಯಿಕ(ದೈಹಿಕ) ನಮಸ್ಕಾರ ಎನಿಸಿಕೊಂಡರೆ, ಮಾತಿನ ಮೂಲಕ ಮಾಡುವ ನಮಸ್ಕಾರವು ವಾಚಿಕ ನಮಸ್ಕಾರ, ಮನಸ್ಸಿನ ಮೂಲಕ ಮಾಡುವ ನಮಸ್ಕಾರವು ಮಾನಸಿಕ ನಮಸ್ಕಾರ ಎಂದು ಕರೆಸಿಕೊಳ್ಳುತ್ತದೆ. ಈ ಮೂರು ವಿಧವಾದ ನಮಸ್ಕಾರಗಳು ಸೇರಿದಾಗ ಮಾತ್ರ ಅದು ಉತ್ತಮ ನಮಸ್ಕಾರ ಎಂದೆನಿಸಿಕೊಳ್ಳುತ್ತದೆ. ಇದನ್ನೇ ತ್ರಿಕರಣ ಪೂರ್ವಕ ನಮಸ್ಕಾರ ಎನ್ನುತ್ತಾರೆ. ಈ ಮೂರು ವಿಧದ ನಮಸ್ಕಾರಗಳಲ್ಲಿ ಕಾಯಿಕ ನಮಸ್ಕಾರವು ಉತ್ತಮ. ವಾಚಿಕ ನಮಸ್ಕಾರವು ಅಧಮ. ಮಾನಸಿಕ ನಮಸ್ಕಾರವು ಮಧ್ಯಮ ಎಂದು ವಿಭಾಗ ಮಾಡಲಾಗಿದೆ
ಕಾಯಿಕ ವಾಗ್ಭವಶ್ಚೈವ ಮಾನಸಸ್ತ್ರಿವಿಧಸ್ಸ್ಮೃತಃ।
ನಮಸ್ಕಾರಸ್ತು ತತ್ವಜ್ಞೈಃ ಉತ್ತಮಾಧಮಮಧ್ಯಮಾಃ ॥
ಎಂಬುದಾಗಿ. ಕಾಯದಿಂದ ಮಾಡುವ ನಮಸ್ಕಾರಗಳಲ್ಲಿ ಪುನಃ ಮೂರುವಿಧಗಳಿವೆ. ಕಾಯಿಕ ಉತ್ತಮ, ಕಾಯಿಕ ಮಧ್ಯಮ, ಕಾಯಿಕ ಅಧಮ ಎಂಬುದಾಗಿ. ಕಾಯಿಕ ಉತ್ತಮ ನಮಸ್ಕಾರದ ವಿಧವನ್ನು ಹೇಳುತ್ತಿದ್ದಾರೆ

ಪ್ರಸಾರ್ಯ ಪಾದೌ ಹಸ್ತೌ ಚ ಪತಿತ್ವಾ ದಂಡವತ್ ಕ್ಷಿತೌ ।
ಜಾನುಭ್ಯಾಂ ಧರಣೀಂ ಗತ್ವಾ ಶಿರಸಾ ಸ್ಪೃಶ್ಯ ಮೇದಿನೀಮ್ ।
ಕ್ರಿಯತೇ ಯೋ ನಮಸ್ಕಾರಃ ಉತ್ತಮಕಾಯಿಕಸ್ತು ಸಃ ॥
ಎಂಬುದಾಗಿ.

ಕಾಯಿಕ ಉತ್ತಮ:
ಭೂಮಿಯಲ್ಲಿ ದಂಡಾಕಾರವಾಗಿ ಮಲಗಿ, ಹಸ್ತ, ಪಾದಗಳನ್ನು ಚಾಚಿ, ಮಂಡಿ, ತಲೆಗಳಿಂದ ಭೂಮಿಯನ್ನು ಸ್ಪರ್ಶಿಸುತ್ತಾ, ನಮ್ಮ ಕಣ್ಣನ್ನು ಭಗವಂತನ ಪಾದದಲ್ಲಿಟ್ಟು, ಮನಸ್ಸನ್ನು ಭಗವಂತನಲ್ಲಿ ನೆಟ್ಟು ಮಾಡುವ ನಮಸ್ಕಾರವೇ ಕಾಯಿಕ ಉತ್ತಮ ನಮಸ್ಕಾರ. ಈ ರೀತಿಯ ನಮಸ್ಕಾರವನ್ನು ಪುರುಷರು ಮಾತ್ರ ಮಾಡಬೇಕು.

ಕಾಯಿಕ ಮಧ್ಯಮ:
ಮಂಡಿಗಳನ್ನು ಭೂಮಿಯಲ್ಲಿ ಊರಿ, ತಲೆಯನ್ನು ಭೂಮಿಗೆ ತಾಗಿಸಿ ಕಣ್ಣನ್ನು ಭಗವಂತನ ಪಾದದಲ್ಲಿಟ್ಟು, ಮನಸ್ಸನ್ನು ಭಗವಂಕನ ರೂಪದಲ್ಲಿಟ್ಟು ಮಾಡುವ ನಮಸ್ಕಾರವೇ ಕಾಯಿಕ ಮಧ್ಯಮ ಎಂದೆನಿಸಿಕೊಳ್ಳುತ್ತದೆ.
ಜಾನುಭ್ಯಾಂ ಚ ಕ್ಷಿತಿಂ ಸ್ಪೃಷ್ಟ್ವಾ ಶಿರಸಾ ಸ್ಪೃಶ್ಯ ಮೇದಿನೀಮ್ ।
ಕ್ರಿಯತೇ ಯೋ ನಮಸ್ಕಾರಃ ಮಧ್ಯಮಃ ಕಾಯಿಕಸ್ತು ಸಃ ॥
ಎಂದು ಹೇಳಿ ಈ ನಮಸ್ಕಾರವನ್ನು ಸ್ತ್ರೀಪುರುಷರಿಬ್ಬರೂ ಮಾಡಬಹುದೆಂದು ಹೇಳಿ, ಮುಂದೆ ಕಾಯಕ ಅಧಮ ನಮಸ್ಕಾರದ ರೀತಿಯನ್ನು ಹೇಳುತ್ತಿದ್ದಾರೆ

ಕಾಯಿಕ ಅಧಮ:
ಪುಟೀಕೃತ್ಯ ಕರೌ ಶೀರ್ಷೇ ದೀಯತೇ ಯದ್ಯಥಾ ತಥಾ ।
ಅಸ್ಪೃಷ್ಟ್ವಾ ಜಾನುಶೀರ್ಷಾಭ್ಯಾಂ ಕ್ಷಿತಿಂ ಸೋಽಧಮ ಉಚ್ಯತೇ ॥
ಮಂಡಿ ಮತ್ತು ತಲೆ ಯನ್ನು ಭೂಮಿಗೆ ತಾಗಿಸದೇ, ಕೈಯನ್ನು ತಲೆಯಲ್ಲಿಟ್ಟು ಮಾಡುವ ನಮಸ್ಕಾರವು ಕಾಯಕ ಅಧಮ ನಮಸ್ಕಾರ ಎಂದು ಕರೆಸಿಕೊಳ್ಳುತ್ತದೆ.
ಇಲ್ಲಿ ಒಂದು ಪ್ರಶ್ನೆ ಬರುತ್ತದೆ ಎನೆಂದರೆ? ಕಾಯಕ ಉತ್ತಮದ ನಮಸ್ಕಾರವನ್ನು ಪುರುಷರು ಮಾತ್ರ ಏಕೆ ಮಾಡಬೇಕು, ಸ್ತ್ರೀಯರು ಏಕೆ ಮಾಡಬಾರದು ಎಂಬುದಾಗಿ? ಅದಕ್ಕೆ ಉತ್ತರವನ್ನು ಈ ರೀತಿ ಹೇಳುತ್ತಿದ್ದಾರೆ.

ಬ್ರಾಹ್ಮಣಸ್ಯ ಗುದಂ ಶಂಖಂ ಯೋಷಿತಃ ಸ್ತನಮಂಡಲಮ್ ।
ರೇತಃ ಪವಿತ್ರಗ್ರಂಥಿಂ ಚ ನ ಭೂಃ ಧಾರಯಿತುಂ ಕ್ಷಮಾ ॥
ಎನೆಂದರೆ ಇಡೀ ಭೂ ಮಂಡಲದ ಭಾರವನ್ನು ಹೊತ್ತಿರುವ ಭೂದೇವಿಯು ಬ್ರಾಹ್ಮಣರ ಗುದಪ್ರದೇಶವನ್ನು, ಶಂಖವನ್ನು, ಸ್ತ್ರೀಯರ ಸ್ತನಮಂಡಲವನ್ನು, ಶುಕ್ಲರೂಪದಲ್ಲಿರುವ ರೇತಸ್ಸನ್ನು, ಧಭರ್?ಯ ಗ್ರಂಥಿಯನ್ನು ಧರಿಸಲಾರಳಂತೆ. ಆದುದರಿಂದ ಸ್ತ್ರೀಯರು ಕಾಯಕ ಉತ್ತಮ ನಮಸ್ಕಾರವನ್ನು ಮಾಡಬಾರದೆಂದು ತಿಳಿಸುತ್ತಾ ಇದನ್ನು ಕೇವಲ ಪುರುಷರಿಗೆ ಮಾತ್ರ ವಿಧಾನ ಮಾಡಿರುವರು. ಅಲ್ಲದೇ! ಪುರುಷರು ಆಸನವಿಲ್ಲದೇ ನೆಲದ ಮೇಲೆ ಕುಳಿತುಕೊಳ್ಳಬಾರದೆಂದೂ ಕೂಡ ವಿಧಾನ ಮಾಡಿರುವರು.

ಪ್ರಣಾಮ ಎಂದರೇನು?
ಸ್ವಾಪಕರ್ಷಬೋಧಕ, ಪರೋತ್ಕರ್ಷಬೋಧಕ ಕಾಯಕವ್ಯಾಪಾರಃ ನಮಸ್ಕಾರಃ ಎನ್ನುವ ದುರ್ಗಾದಾಸನ ಮಾತಿನಂತೆ ಪ್ರಣಾಮವೆಂದರೆ ನಮಗಿಂತ ಹಿರಿಯರ ಮುಂದೆ ನಾನು ಅಲ್ಪ ಎನ್ನುವ ಭಾವನೆಯನ್ನು ಪ್ರತಿಬಿಂಬಿಸುವ ದೈಹಿಕ ವ್ಯಾಪಾರದ ಅನುಸಂಧಾನವೇ ನಮಸ್ಕಾರ ವೆಂದು ಗೊತ್ತಾಗುತ್ತದೆ. ಅಲ್ಲದೇ! ಮೇಲೆ ತಿಳಿಸಿದಂತೆ ಕಾಯವನ್ನು ಭೂಮಿಯಲ್ಲಿ ಬೀಳಿಸಿ, ತಲೆ ಯ ಮೇಲುಗಡೆ ಗುಣಾಕಾರದ ಚಿಹ್ನೆ( ) ಯಂತೆ ಎಡಕೈಯ ಮೇಲೆ ಬಲಕೈ ಬರುವಂತೆ ಮಾಡಿ, ನಮ್ಮ ಬಲಕೈ ಭಗವಂತನ ಬಲಪಾದವನ್ನು, ನಮ್ಮ ಎಡಕೈ ಭಗವಂತನ ಎಡಪಾದವನ್ನು ಮುಟ್ಟು ವಂತೆ ಮಾಡುವ ನಮಸ್ಕಾರವೇ ಪ್ರಣಾಮ ಎಂಬುದಾಗಿ ಕಾಲಿಕಾ ಖಂಡವು ಈ ರೀತಿಯಾಗಿ ತಿಳಿಸುತ್ತಿದೆ
ಅಯಮೇವ ನಮಸ್ಕಾರಃ ದಂಡಾದಿಪ್ರತಿಪತ್ತಿಭಿಃ।
ಪ್ರಣಾಮ ಇತಿ ಜ್ಞೇಯಃ ಸ ಪೂರ್ವಪ್ರತಿಪಾದಿತಃ ॥
ಎಂಬುದಾಗಿ. ಇಂತಹ ಪ್ರಣಾಮವು ನಮ್ಮಲ್ಲಿರುವ ಅಹಂಕಾರವನ್ನು ಹೊಡೆದೋಡಿಸಿ, ನಾವು ನಮಸ್ಕಾರಾರ್ಹನಿಗಿಂತ ಸಣ್ಣವರು ಎನ್ನುವ ಭಾವನೆಯನ್ನು ಜಾಗೃತಗೊಳಿಸುತ್ತದೆ.
ಇಂತಹ ನಮಸ್ಕಾರದಲ್ಲಿ ಪುನಃ ನಾಲ್ಕುವಿಧಗಳಿವೆ. ಅವುಗಳೆಂದರೆ (1) ಭಕ್ತಿಪೂರ್ವಕ ನಮಸ್ಕಾರ (2) ಅಷ್ಟಾಂಗ ನಮಸ್ಕಾರ (3) ಪಂಚಾಂಗ ನಮಸ್ಕಾರ (4) ಅಭಿವಾದನ ಎಂಬುದಾಗಿ.



ಪ್ರಶಾಂತಭಟ್ ಕೋಟೇಶ್ವರ

# ವೃದ್ಧಾಪ್ಯ, ವಯೋ ಸಹಜ ತೊಂದರೆಗಳು.. ಶಾಪವಲ್ಲ

ಸಾಮಾನ್ಯವಾಗಿ ಆರೋಗ್ಯದಲ್ಲಿ ವ್ಯತ್ಯಾಸವಾದಾಗ ನಾವು ವೈದ್ಯರಲ್ಲಿ ಹೋಗುತ್ತೇವೆ. ಚಿಕಿತ್ಸೆ ಪಡೆದು ಅವರು ಕೊಡುವ ಔಷಧಿ ಮಾತ್ರೆಗಳನ್ನು ಸೇವಿಸಿ ಗುಣಮುಖರಾಗುವ ಆಶಯವನ್ನು ಹೊಂದುತ್ತೇವೆ. ಆದರೆ ಕೆಲವು ಜನರು ಬಹಳಷ್ಟು ಬಾರಿ ತೊಂದರೆಗಳನ್ನು ಕೇವಲ ಒಂದೇ ಸಿಟ್ಟಿಂಗ್ ನಲ್ಲಿ ಅಥವಾ ಒಂದು ಬಾರಿಯ ಔಷಧಿ ಮಾತ್ರೆ ಸೇವನೆಯಿಂದ ಗುಣವಾಗಲಿ ಎಂದು ಆಶಿಸುತ್ತಾರೆ. ಅಂತಹವರು ವೈದ್ಯರಿಗೆ ತಾವಾಗಿಯೇ ಇಂಜೆಕ್ಷನ್ ಮಾಡಲು ಕೇಳಿಕೊಳ್ಳುತ್ತಾರೆ.

ಔಷಧಿ ಮತ್ತು ಮಾತ್ರೆ ಗಳಿಂದ ಬೇಗನೆ ಗುಣವಾಗುವುದಿಲ್ಲ ಇಂಜೆಕ್ಷನ್ ಮಾಡಿದರೆ ತೀವ್ರ ಗುಣಮುಖವಾಗುತ್ತದೆ ಎಂಬುದು ಅವರ ಅಭಿಪ್ರಾಯ. ಎಷ್ಟೋ ಜನರು ಇಂಜೆಕ್ಷನ್ ಮಾಡದ ವೈದ್ಯರನ್ನು ಒಂದು ಸೂಜಿ ಮಾಡದ ಆತ ಅದೆಂತ ವೈದ್ಯ ಎಂದು ಮೂದಲಿಸುವುದೂ ಉಂಟು. ಮತ್ತೆ ಕೆಲವರು ಮೊದಲ ದಿನ ಒಬ್ಬ ವೈದ್ಯರ ಬಳಿ ಹೋಗಿ ಮರುದಿನ ಮತ್ತೊಬ್ಬ ಅದರ ಮರುದಿನ ಮಗದೊಬ್ಬ ವೈದ್ಯರ ಬಳಿ ಚಿಕಿತ್ಸೆ ಪಡೆಯುತ್ತಾರೆ. ಮೂರರಿಂದ ಐದು ದಿನಗಳ ಕಾಲ ಇರುವ ಜ್ವರ, ಕೆಮ್ಮು, ನೆಗಡಿಯಂತಹ ಕಾಯಿಲೆಗಳು ಕೊನೆಯ ದಿನ ಯಾವ ವೈದ್ಯರ ಬಳಿ ಹೋದಾಗ ಗುಣವಾಗುತ್ತದೆಯೋ ಅದೇ ವೈದ್ಯರು ಅತ್ಯುತ್ತಮ ಎಂದು ಶರಾ ಬರೆಯುತ್ತಾರೆ. ಇದು ವೈದ್ಯರು ತಮ್ಮ ವೃತ್ತಿ ಜೀವನದಲ್ಲಿ ಎದುರಿಸುವ ಅತಿ ದೊಡ್ಡ ಸಮಸ್ಯೆಯಾಗಿದೆ.

ಜನಕ್ ಎಸ್ ಗುಲೇಚ ಎಂಬ ಹಿರಿಯ ವ್ಯಕ್ತಿ, ಹಲವಾರು ಆಸ್ಪತ್ರೆಗಳ ಆಡಳಿತ ಮಂಡಳಿಯ ನಿರ್ದೇಶಕರಾಗಿರುವವರು ಹಿರಿಯ ವಯಸ್ಸಿನ ವೃದ್ಧರಿಗೆ ಈ ಐದು ಮುಖ್ಯ ವಿಷಯಗಳನ್ನು ಅತ್ಯಂತ ಕಾಳಜಿ ಪೂರ್ವಕವಾಗಿ ಅರಿತುಕೊಳ್ಳಲು ಒತ್ತಾಯಿಸುತ್ತಾರೆ. ಬಹಳಷ್ಟು ಕಾಯಿಲೆಗಳು ಎಂದು ತೋರುವ ಮನೋದೈಹಿಕ ತೊಂದರೆಗಳು ನಿಜವಾಗಿಯೂ ಕಾಯಿಲೆಗಳಲ್ಲ ಅವು ವಯೋಸಹಜವಾಗಿ ಉಂಟಾಗುವ ತೊಂದರೆಗಳು. ಇಂತಹ ತೊಂದರೆಗಳಿಗೆ ಪದೇ ಪದೇ ವೈದ್ಯರ ಬಳಿ ಸಾರಿ ಔಷಧೀಯ ಚಿಕಿತ್ಸೆ ಪಡೆದುಕೊಳ್ಳುವ ಮೂಲಕ ನೋವನ್ನು ಹತ್ತಿಕ್ಕಬಹುದೇ ಹೊರತು ನೋವಿನ ಮೂಲವನಲ್ಲ ಕಾರಣ ನೋವಿನ ಮೂಲ ವೃದ್ಧಾಪ್ಯದೆಡೆಗಿನ ಹೆಜ್ಜೆ ಅಲ್ಲವೇ?
ನಿಮ್ಮ ಆರೋಗ್ಯ ದಲ್ಲಿ ಯಾವುದೇ ವ್ಯತ್ಯಾಸವಾಗಿಲ್ಲ ಆದರೆ ನಿಮಗೆ ವಯಸ್ಸಾಗುತ್ತಿದೆ ಎಂಬ ಸತ್ಯವನ್ನು ಒಪ್ಪಿ ಅಪ್ಪಿಕೊಳ್ಳಿ.
ನೀವು ತೊಂದರೆ ಎಂದು ಭಾವಿಸುವ ಬಹುತೇಕ ಸಮಸ್ಯೆಗಳು ವೃದ್ಧಾಪ್ಯದ ಕಾರಣದಿಂದ ಉಂಟಾಗುವ ಸಾಮಾನ್ಯ ಸಮಸ್ಯೆಗಳಾಗಿರುತ್ತವೆ.
ಪದೇ ಪದೇ ವಸ್ತುಗಳನ್ನು ಮರೆಯುವುದು ವಯೋ ಸಹಜ ಮರೆವಿನ ಕಾರಣಕ್ಕೆ ಮಾತ್ರ. ಮತ್ತೆ ಕೆಲವೊಮ್ಮೆ ಅನ್ಯಮನಸ್ಕತೆಯಿಂದ ಮರೆವು ಉಂಟಾಗುತ್ತದೆಯೇ ಹೊರತು ಎಲ್ಲ ಮರೆವುಗಳು ಅಲ್ಜೈಮರ ಕಾಯಿಲೆಯ ಲಕ್ಷಣವಲ್ಲ.

ಯಾವುದೋ ಧ್ಯಾನದಲ್ಲಿ ಇಲ್ಲವೇ ಅವಸರದಲ್ಲಿ ಕನ್ನಡಕ, ಮೊಬೈಲ್, ಕರವಸ್ತ್ರ, ಬೈಕು ಇಲ್ಲವೇ ಕಾರಿನ ಕೀಲಿಗಳನ್ನು ಮರೆಯುವುದು ಸಾಮಾನ್ಯವಾದ ಕ್ರಿಯೆ. ಬದುಕಿನಲ್ಲಿ ಆಯಾ ವಸ್ತುಗಳನ್ನು ನಿಗದಿತ ಸ್ಥಳದಲ್ಲಿ ಇಡುವ ಶಿಸ್ತನ್ನು ರೂಢಿಸಿಕೊಂಡರೆ ಬಹಳಷ್ಟು ಬಾರಿ ಈ ತೊಂದರೆಯಿಂದ ದೂರವಾಗಬಹುದು. ಇದು ಚಿಕ್ಕ ವಯಸ್ಸಿನವರಲ್ಲಿಯೂ ಕಂಡು ಬರುತ್ತದೆ. ನಿರ್ಲಕ್ಷ, ಅಶಿಸ್ತು ಮತ್ತು ಅತ್ಯಾತುರಗಳು ಎಷ್ಟೋ ಬಾರಿ ಮರೆವಿಗೆ ಕಾರಣವಾಗುತ್ತದೆ.

ಇಂತಹ ಸಮಯದಲ್ಲಿ ಕಳೆದುಕೊಂಡ ವಸ್ತುಗಳನ್ನು ಗಾಬರಿಯಿಂದ ಹುಡುಕುವ ಮುನ್ನ ಒಂದೆಡೆ ಶಾಂತವಾಗಿ ಕುಳಿತು ಕೊನೆಯ ಬಾರಿ ಆ ವಸ್ತುವನ್ನು ಎಲ್ಲಿಟ್ಟೆ ಎಂಬುದನ್ನು ನೆನಪಿಸಿಕೊಳ್ಳಬೇಕು. ಹಾಗೆ ನೆನಪಿಸಿಕೊಂಡಾಗ ಖಂಡಿತವಾಗಿಯೂ ಅದು ನಮಗೆ ದೊರೆಯುವ ಸಾಧ್ಯತೆಗಳು ಬಹಳ. ಕಳೆಯದ ಹೊರತು ಎಲ್ಲೋ ಎತ್ತಿಟ್ಟಿರುವ ವಸ್ತುಗಳು ಅತ್ಯಂತ ಸುಲಭವಾಗಿ ದೊರೆಯುತ್ತವೆ. ಆಗ ಸರಳವಾಗಿ ಮನದ ಗೊಂದಲಗಳು ಬಗೆಹರಿಯುತ್ತವೆ.
ನೀವು ಕಳೆದುಕೊಂಡ ವಸ್ತುಗಳನ್ನು ಕಳೆದುಕೊಂಡ ಜಾಗದಲ್ಲಿಯೇ ಮರಳಿ ಪಡೆಯುತ್ತೀರಿ.... ಇದು ಖಂಡಿತವಾಗಿಯೂ ಮರೆವಲ್ಲ.... ಡಿಮೆನ್ಸಿಯಾ, ಅಲ್ಜೈಮರ ಅಂತೂ ಅಲ್ಲವೇ ಅಲ್ಲ.
2. ನಿಮ್ಮ ನಡಿಗೆಯಲ್ಲಾಗುವ ವ್ಯತ್ಯಾಸ ಇಲ್ಲವೇ ನಿಧಾನ ನಡಿಗೆ, ಕಾಲುಗಳಲ್ಲಿ ನಡುಕ ಉಂಟಾಗುವುದು ಕೂಡ ವಯೋ ಸಹಜ ನಿ:ಶಕ್ತಿಯಿಂದಲೇ ಹೊರತು ಪಾರ್ಶ್ವ ವಾಯುವಿನ ಚಿಹ್ನೆಗಳಲ್ಲ. ಇದಕ್ಕೆ ಕಾರಣ ಸ್ನಾಯು ದೌರ್ಬಲ್ಯವೇ ಹೊರತು ಬೇರೇನೂ ಅಲ್ಲ. ಪರಿಹಾರ ಅತ್ಯಂತ ಸರಳ ಹಾಗೂ ಸುಲಭವಾದದ್ದು ನಿಗದಿತವಾಗಿ ವ್ಯಾಯಾಮ ಮಾಡುವ ಮೂಲಕ ಸ್ನಾಯುಗಳಲ್ಲಿ ಬಲವನ್ನು ಹೆಚ್ಚಿಸಿಕೊಳ್ಳಬಹುದು. ಪ್ರತಿದಿನ ಇಂತಿಷ್ಟು ದೂರ ನಡೆಯಲೇಬೇಕು ಎಂಬ ಮಿತಿಯನ್ನು ಹಾಕಿಕೊಂಡು ಅದನ್ನು ಪಾಲಿಸುವ ಮೂಲಕ ಈ ದೌರ್ಬಲ್ಯವನ್ನು ಮೆಟ್ಟಿ ನಿಲ್ಲಬೇಕು.

ವಯೋಸಹಜವಾಗಿ ದೇಹದಲ್ಲಿ ಚೋದಕಗಳು ಸರಿಯಾಗಿ ಬಿಡುಗಡೆ ಆಗದೆ ಹೋದಾಗ ದೇಹವು ಹಲವಾರು ಪೋಷಕ ಅಂಶಗಳ ಕೊರತೆಯಿಂದ ಬಳಲುತ್ತದೆ.... ಅದೂ ಅಲ್ಲದೆ ಈ ಹಿಂದಿನ ದೈಹಿಕ ಶ್ರಮದ ಬದುಕು ಇಲ್ಲದೆ ಹೋಗಿದ್ದು, ಆಹಾರ ಸಂಸ್ಕೃತಿಯು ಕೂಡ ಕಾಲಕ್ಕೆ ತಕ್ಕಂತೆ ಬದಲಾಗಿದೆ. ಕಡಿಮೆಯಾದ ದೈಹಿಕ ಶ್ರಮ ಹಾಗೂ ಹೆಚ್ಚು ಎಣ್ಣೆ, ಬೆಣ್ಣೆ, ಸಿಹಿಯನ್ನು ಒಳಗೊಂಡ ಆಹಾರ ಪದಾರ್ಥಗಳು ನಮ್ಮ ದೇಹದಲ್ಲಿ ಕೊಬ್ಬನ್ನು ಹೆಚ್ಚಿಸಿ ಅದರ ಪರಿಣಾಮವಾಗಿ ಬೊಜ್ಜು, ರಕ್ತದೊತ್ತಡ ಹಾಗೂ ಮಧುಮೇಹಗಳಿಗೆ ಕಾರಣವಾಗುತ್ತದೆ. ಇದರ



ಪರಿಣಾಮವಾಗಿ ದೈಹಿಕ ಅಶಕ್ತತೆ ಕಾಡಬಹುದು ಪರಿಹಾರ ನಮ್ಮ ಕೈಯಲ್ಲಿದ್ದು ವ್ಯಾಯಾಮ, ನಡಿಗೆ, ಯೋಗ, ಧ್ಯಾನಗಳಲ್ಲಿ ನಮ್ಮನ್ನು ನಾವು ತೊಡಗಿಸಿಕೊಳ್ಳಬೇಕು.
3.ನಿದ್ರಾ ಹೀನತೆ ಇಲ್ಲವೇ ನಿದ್ರಾ ರಹಿತತೆ.... ಎಲ್ಲಾ ನಿದ್ರಾ ರಹಿತತೆಗಳು ಇನ್ ಸೋಮ್ನಿಯಾ ಎಂಬ ನಿದ್ರಾಹೀನತೆಯ ತೊಂದರೆ ಅಲ್ಲ.

ವೃದ್ಧಾಪ್ಯದಲ್ಲಿ ಮೆದುಳಿನ ವಿಶ್ರಾಂತಿ ಪ್ರಕ್ರಿಯೆಯಲ್ಲಿ ಬದಲಾವಣೆಯಾಗುತ್ತದೆ... ಪರಿಣಾಮವಾಗಿ ನಿದ್ರೆಯು ಕೂಡ. ಇದನ್ನು ವಯೋಸಹಜವಾಗಿ ಬದಲಾದ ನಿದ್ರಾ ಪ್ರಕ್ರಿಯೆ ಎಂದು ಹೇಳಬಹುದೇ ಹೊರತು ನಿದ್ರಾಹೀನತೆಯ ಕಾಯಿಲೆ ಅಲ್ಲವೇ ಅಲ್ಲ.
ಪ್ರತಿ ಬಾರಿಯೂ ನಿದ್ರೆ ಬಾರದೆ ಇರಲು ಹಾಸಿಗೆಯಲ್ಲಿ ಅತ್ತಿಂದಿತ್ತ ಹೊರಳಾಡುವುದು, ಮೊಬೈಲ್ ಕೈಯಲ್ಲಿ ಹಿಡಿದು ಕುಳಿತುಕೊಳ್ಳುವುದು, ತಡ ರಾತ್ರಿಯವರೆಗೆ ಟಿವಿ ನೋಡುವುದು ಖಂಡಿತವಾಗಿಯೂ ಪರಿಹಾರವನ್ನು ನೀಡುವುದಿಲ್ಲ.... ಇದು ಸಮಸ್ತೆಯನ್ನು ಹೆಚ್ಚಿಸುತ್ತದೆ. ಇನ್ನು ನಿದ್ರೆಯನ್ನು ಮಾಡಲು ಮಾತ್ರೆಗಳನ್ನು ಸೇವಿಸುವುದು ಇನ್ನೂ ಅಪಾಯಕಾರಿ. ಇದು ಬೀಳುವ ತೊಂದರೆಗೆ ಕಾರಣವಾಗುತ್ತದೆ.ನಿದ್ರೆ ಮಾತ್ರೆಗಳ ಸೇವನೆಯು ಮೆದುಳಿನ ಚಟುವಟಿಕೆಗಳಿಗೆ, ನೆನಪಿನ ಶಕ್ತಿಯು ಕುಂಠಿತವಾಗಲು ಕಾರಣವಾಗುತ್ತದೆ.

ಇದಕ್ಕೆ ಅತ್ಯಂತ ಸುಲಭ ಹಾಗೂ ಸರಳವಾದ ಪರಿಹಾರವೆಂದರೆ ಹಗಲು ಹೊತ್ತಿನಲ್ಲಿ ಹೆಚ್ಚಾಗಿ ಸೂರ್ಯನ ಬೆಳಕಿನಲ್ಲಿ ಕಾಲ ಕಳೆಯಬೇಕು ಮತ್ತು ಪ್ರತಿದಿನ ನಿಗದಿತವಾದ ದಿನಚರಿಯನ್ನು ಪಾಲಿಸಬೇಕು. ಅದುವೇ ನಿಜವಾದ ಔಷಧಿಯಾಗಿ ಪರಿಣಮಿಸುತ್ತದೆ. ರಾತ್ರಿಯ ಊಟವನ್ನು ಎಂಟು ಗಂಟೆಗೆ ಮೊದಲೇ ಮಾಡಿ ಮುಗಿಸಬೇಕು ಸಂಜೆ 6ರ ನಂತರ ಚಹಾ ಕಾಫಿ ಸೇವನೆಯನ್ನು ಮಾಡಲೇಬಾರದು.

ದೇಹದ ವಿವಿಧ ಅಂಗಗಳಲ್ಲಿ ನೋವು ಎಂದರೆ ಅರ್ಥರೈಟಿಸ್ ಇಲ್ಲವೇ ಆಸ್ಟಿಯೋಪೊರೋಸಿಸ್ ಎಂಬ ಮೂಳೆ ಸವೆತದ ಕಾಯಿಲೆಗಳಲ್ಲ. ಬಹಳಷ್ಟು ಬಾರಿ ವೃದ್ಧರು ತಮ್ಮ ಮೊಣಕಾಲುಗಳಲ್ಲಿ ಹಾಗೂ ಮಣಿಗಂಟುಗಳಲ್ಲಿ, ಕೀಲುಗಳಲ್ಲಿ ನೋವಿರುವುದನ್ನು ಹೇಳಿ ಇದು ಎಲುಬುಗಳ ಅಶಕ್ತತೆ ಅಲ್ಲವೇ ಎಂದು ಕೇಳುತ್ತಾರೆ.

ಆದರೆ ದೇಹದಲ್ಲಿರುವ ಮೂಳೆಗಳು ವಯಸ್ಸಾದಂತೆ ತೆಳುವಾಗುತ್ತವೆ. ಅವುಗಳಲ್ಲಿ ಕ್ಯಾಲ್ಸಿಯಂನ ಕೊರತೆ ಉಂಟಾಗುತ್ತದೆ. ಶೇಕಡ 99 ರಷ್ಟು ನೋವು ವಯಸ್ಸು ಹೆಚ್ಚಿದಂತೆ ನರಗಳಲ್ಲಿ, ನರವ್ಯೂಹದ ರಚನೆಯಲ್ಲಿ ಉಂಟಾಗುತ್ತದೆ ಇದನ್ನು ಕೇಂದ್ರ ನರವ್ಯೂಹದಲ್ಲಿ ಉಂಟಾಗುವ ಸಂವೇದನೆ (ಸೆಂಟ್ರಲ್ ಸೆನ್ಸಿಟೈಸೇಷನ್) ಎಂದು ಕರೆಯುತ್ತಾರೆ.

ಔಷಧಿ ಮತ್ತು ಮಾತ್ರೆಗಳಿಂದ ಈ ನೋವುಗಳು ಶಮನವಾಗುವುದಿಲ್ಲ, ಬದಲಾಗಿ ಲಘು ವ್ಯಾಯಾಮ ಮತ್ತು ಫಿಜಿಯೋಥೆರಪಿ ವ್ಯಾಯಾಮಗಳು ನೋವನ್ನು ನಿವಾರಿಸುವಲ್ಲಿ ಸಹಾಯಕವಾಗುತ್ತದೆ. ಪ್ರತಿದಿನ ರಾತ್ರಿ ಮಲಗುವ ಮುನ್ನ ಪಾದಗಳನ್ನು ತುಸು ಬಿಸಿಯಾದ ನೀರಿನಲ್ಲಿ ಹತ್ತಿಪ್ಪತ್ತು ನಿಮಿಷಗಳ ಕಾಲ ಇಡುವ ಮೂಲಕ ಕೂಡ ನೋವನ್ನು ನಿವಾರಿಸಿಕೊಳ್ಳಬಹುದು. ಬಿಸಿನೀರು ಉಬ್ಬಿರುವ ನಾಳಗಳ ಊತವನ್ನು ಕಡಿಮೆಗೊಳಿಸುತ್ತದೆ. ಲಘುವಾಗಿ ಎಣ್ಣೆಯನ್ನು ಹಚ್ಚಿ ಮಸಾಜ್ ಮಾಡುವ ಮೂಲಕವೂ ಕೂಡ ನೋವನ್ನು ನಿರ್ಮೂಲಗೊಳಿಸಬಹುದು.

ರೋಗ ಚಿಕಿತ್ಸಾ ವಿಧಾನದ ರಿಪೋರ್ಟ್ಗಳಲ್ಲಿ ಇರುವ ವ್ಯತ್ಯಾಸವೇ ಕಾಯಿಲೆಯಲ್ಲ. ನಮ್ಮ ದೇಹದ ಪ್ರತಿಯೊಂದು ವ್ಯವಸ್ಥೆಗೂ ತನ್ನದೇ ಆದ ಗರಿಷ್ಠ ದಿಂದ ಕನಿಷ್ಠ ಮಿತಿಗಳು ಇದ್ದು ಅವುಗಳ ನಡುವಿನ ಯಾವುದೇ ಮಿತಿ ಸರಿ ಎಂದು ಇರುತ್ತದೆ.

ಈ ಹಿಂದಿನ ಪರೀಕ್ಷೆಗಳ ರಿಪೋರ್ಟುಗಳು ಹಳತಾಗಿದ್ದರೆ ಕೂಡ ವಿಶ್ವ ಆರೋಗ್ಯ ಸಂಸ್ಥೆಯು ಹೆಚ್ಚು ವಯಸ್ಸಾದವರ ದೈಹಿಕ ನಿಮ್ನತೆಯು ಸೂಕ್ಷ್ಮವಾಗಿರಬೇಕು ಎಂದು ಹೇಳುತ್ತಾರೆ. ಉದಾಹರಣೆಗೆ ತುಸು ಹೆಚ್ಚು ಕೊಲೆಸ್ಟ್ರಾಲ್ ಇದ್ದರೂ ಅದು ಅಷ್ಟೊಂದು ಹಾನಿಕರವಲ್ಲ ಕಾರಣ ಮೆಂಬ್ರೇನುಗಳು ಮತ್ತು ಹಾರ್ಮೋನುಗಳಿಂದ ಮಾಡಲ್ಪಟ್ಟ ಕೊಲೆಸ್ಟ್ರಾಲ್ ಹೆಚ್ಚಿನ ಶಕ್ತಿಯನ್ನು ನೀಡುವ ಮೂಲಕ ದೀರ್ಘ ಕಾಲ ಆರೋಗ್ಯವನ್ನು ಕಾಯ್ದಿಟ್ಟುಕೊಳ್ಳಲು ಅನುಕೂಲವನ್ನು ಕಲ್ಪಿಸುತ್ತದೆ. ಕೊಲೆಸ್ಟ್ರಾಲ್ ಕಡಿಮೆ ಇದ್ದರೆ ಅದು ದೇಹದ ರೋಗ ನಿರೋಧಕ ಶಕ್ತಿಯನ್ನು ಕೂಡ ಕಡಿಮೆಗೊಳಿಸುತ್ತದೆ
ಅಮೆರಿಕದ ಆಸ್ಪತ್ರೆಗಳು ಅತಿ ಹೆಚ್ಚಿನ ರಕ್ತದ ಒತ್ತಡವನ್ನು ಅದರಲ್ಲೂ ವಯಸ್ಸಾದವರ ರಕ್ತದ ಮಟ್ಟ 150 / 90 ಒಟ ಭ್ರಂ ಇದ್ದರೂ ಅದು ತೊಂದರೆ ನೀಡುವುದಿಲ್ಲ 120/ 80 ಒಟ ಭ್ರಂ ಇರುವುದು ಕೇವಲ ಮಹಿಳೆಯರಲ್ಲಿ ಮತ್ತು ಚಿಕ್ಕ ಮಕ್ಕಳಲ್ಲಿ ಮಾತ್ರ.

ಸ್ನೇಹಿತರೆ ವೃದ್ಧಾಪ್ಯ ಕಾಯಿಲೆ ಇಲ್ಲ...
ವಯೋ ಸಹಜವಾಗಿ ಉಂಟಾಗುವ ಬದಲಾವಣೆಗಳು ಕಳೆದುಕೊಳ್ಳುವಿಕೆ ಅಲ್ಲ.... ವೃದ್ಧಾಪ್ಯ ಎನ್ನುವುದು ಬದುಕಿನ ಒಂದು ಹಂತ... ದೇಹಕ್ಕೆ ಉಂಟಾಗುವ ಎಲ್ಲಾ ಅನಾನುಕೂಲತೆಗಳನ್ನು ಕಾಯಿಲೆ ಎಂದು ಭಾವಿಸದಿರಿ.
ಸಮಯಕ್ಕೆ ಸರಿಯಾಗಿ ನಿಗದಿತ ತಪಾಸಣೆಗೆ ಒಳಗಾಗಿ. ಯಾವುದೇ ತೊಂದರೆಗಳಿಗೆ ಗೂಗಲ್ ನ ಮೊರೆ ಹೋಗುವುದು ಬೇಡ. ವಿವಿಧ ಬಗೆಯ ಆರೋಗ್ಯದ ಸಮಸ್ಯೆಗಳಿಗೆ ಜಾಹೀರಾತುಗಳಲ್ಲಿ ತೋರುವ ಪರಿಹಾರಗಳಿಗೆ ನಿಮ್ಮನ್ನು ನೀವು ಒಡ್ಡಿಕೊಳ್ಳಬೇಡಿ... ಎಂಬುದು ಹಿರಿಯರಿಗೆ ನನ್ನ ಕಳಕಳಿಯ ವಿನಂತಿ.
ಇನ್ನು ಮನೆಯಲ್ಲಿ ವಯಸ್ಸಾದವರ ಕಾಳಜಿ ಮಾಡುವ ಮಕ್ಕಳು ನಿಮ್ಮ ಪಾಲಕರನ್ನು ಕೇವಲ ಆಸ್ಪತ್ರೆಗಳಿಗೆ ಮಾತ್ರ ಕರೆದೊಯ್ಯುವ ಬದಲಾಗಿ ಅವರೊಂದಿಗೆ ವಾಕಿಂಗ್ ಮಾಡಿ. ಸೂರ್ಯನ ಬಿಸಿಲಲ್ಲಿ ನಿಮ್ಮ ಪಾಲಕರೊಂದಿಗೆ ಕುಳಿತುಕೊಳ್ಳಿ ಮಾತನಾಡಿ ಆಹಾರವನ್ನು ಸೇವಿಸಿ ಅದುವೇ ನಿಜವಾದ ಔಷಧಿಯಾಗಿ ಪರಿಣಮಿಸುತ್ತದೆ.

ವೃದ್ಧಾಪ್ಯ ಅಥವಾ ಮುಪ್ಪಿನ ಅವಸ್ಥೆ ನಮಗೆ ಶತ್ರುವಲ್ಲ ತಪ್ಪು ತಿಳುವಳಿಕೆ ಮತ್ತು ಅರಿವಿನ ಕೊರತೆಗಳು ನಮ್ಮ ನಿಜವಾದ ಶತ್ರುಗಳು. ವೃದ್ಧಾಪ್ಯವನ್ನು ಸಹಜವಾಗಿ ಸ್ವೀಕರಿಸಿ.



ವೀಣಾ ಹೇಮಂತ್ ಗೌಡ ಪಾಟೀಲ್

ಈ ನಮ್ಮ ಧೃತಿ ನ್ಯೂಸ್

E NAMMA DHURTHI NEWS
KANNADA DAILY NEWS PAPER

## ಬಾವಿಯೊಳಗೆ ಬಿದ್ದಿದ್ದ ನಾಯಿಯನ್ನು ರಕ್ಷಿಸಿದ ಅಗ್ನಿಶಾಮಕ ದಳದ ಸಿಬ್ಬಂದಿ



ಚಿಕ್ಕಬಳ್ಳಾಪುರ: ಸುಮಾರು 80 ಅಡಿಯ ತೆರೆದ ಬಾವಿಯೊಳಗೆ ಕಾಲು ಜಾರಿ ಬಿದ್ದ ನಾಯಿಯೊಂದನ್ನು ತಾಲೂಕಿನ ಕೊಂಡೇನಹಳ್ಳಿ ಗ್ರಾಮದಲ್ಲಿ ಅಗ್ನಿಶಾಮಕ ದಳದ ಸಿಬ್ಬಂದಿ ಸತತ ಮೂರು ಗಂಟೆಗಳ ಕಾಲ ಕಾರ್ಯಾಚರಣೆ ನಡೆಸಿ ಜೀವಂತವಾಗಿ ರಕ್ಷಿಸಿದ್ದಾರೆ.

ಕೊಂಡೇನಹಳ್ಳಿ ಗ್ರಾಮದ ಮಂಜುನಾಥ್ ಅವರಿಗೆ ಸೇರಿದ ಜಮೀನಿನ ಪಕ್ಕದಲ್ಲಿದ್ದ ನೀರು ಹಾಗೂ ಮೆಟ್ಟಿಲುಗಳೂ ಇಲ್ಲದ ಬಾವಿಗೆ ನಾಯಿ ಆಕಸಿಕವಾಗಿ ಕಾಲು ಜಾರಿ ಬಿದ್ದಿತ್ತು. ಮೇಲಕ್ಕೆ ಬರಲಾಗದೆ ಅದು ಒದ್ದಾಡುತ್ತಿದ್ದನ್ನು ಕಂಡು ನಾಯಿಯನ್ನು ರಕ್ಷಿಸಲು ಗ್ರಾಮಸ್ಥರು ಚಿಕ್ಕಬಳ್ಳಾಪುರದ ಅಗ್ನಿಶಾಮಕ ಠಾಣೆಗೆ ಮಾಹಿತಿ ನೀಡಿದ್ದಾರೆ. ಕೂಡಲೇ ಸ್ಥಳಕ್ಕೆ ಧಾವಿಸಿದ ಅಗ್ನಿಶಾಮಕ ಸಿಬ್ಬಂದಿ ಹಗ್ಗ ಮತ್ತು ಬುಟ್ಟಿಯ ನೆರವಿನಿಂದ ಬಾವಿಗಿಳಿದು, ಹರಸಾಹಸಪಟ್ಟು ನಾಯಿಯನ್ನು ಸುರಕ್ಷಿತವಾಗಿ ಮೇಲಕ್ಕೆತ್ತಿದರು. ಪ್ರಭಾರ ಜಿಲ್ಲಾ ಅಗ್ನಿಶಾಮಕ ಅಧಿಕಾರಿ ವಸಂತ್ ಮೇತ್ರಿ ಅವರ ನೇತತ್ವದಲ್ಲಿ ನಡೆದ ಕಾರ್ಯಾಚರಣೆಯಲ್ಲಿ ಅಗ್ನಿಶಾಮಕ ಸಿಬ್ಬಂದಿ ರವೀಂದ್ರ ಸಂಗಮ, ಚಾಲಕರಾದ ಬಸವರಾಜ್, ನಾಗಪ್ಪ ಶಿವಾಪುರ, ಮಲ್ಲಿಕಾರ್ಜುನ ಕಾಡಪ್ಪನವರ, ದತ್ತಾತ್ರೇಯ ಹಾಗೂ ಬೋರಗಾವಿ ಅವರುಗಳು ನಾಯಿಯನ್ನು ಜೀವಂತವಾಗಿ ರಕ್ಷಣೆ ಮಾಡುವಲ್ಲಿ ಯಶಸ್ವಿಯಾಗಿದ್ದಾರೆ . ನಾಯಿಯ ರಕ್ಷಣೆ ಮಾಡಿದ ಅಗ್ನಿಶಾಮಕ ದಳದ ಸಿಬ್ಬಂದಿಯ ಸಮಯಪ್ರಜ್ಞೆ ಮತ್ತು ಸಾಹಸಕ್ಕೆ ಗ್ರಾಮಸ್ಥರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

# ಬಿಜೆಪಿ ಮೂಲಕ ರಾಜಕೀಯಕ್ಕೆ ಬರ್ತಾರಾ ನಟ ಧನುಷ್

ಚೆನ್ನೈ: ದಳಪತಿ ವಿಜಯ್ ಮಾದರಿಯಲ್ಲೇ ಸೂಪರ್‌ಸ್ಟಾರ್ ರಜನಿಕಾಂತ್ ಅವರ ಮಾಜಿ ಅಳಿಯ ಹಾಗೂ ಖ್ಯಾತ ಚಿತ್ರನಟ ಧನುಷ್ ಅವರು ರಾಜಕೀಯ ಪ್ರವೇಶಿಸುವುದು ಖಚಿತ ಎನ್ನುವ ಮಾತುಗಳು ಕೇಳಿಬರುತ್ತಿವೆ.

ಧನುಷ್ ಅವರ 2,500ಕ್ಕೂ ಹೆಚ್ಚು ಮಹಿಳಾ ಬೆಂಬಲಿಗರು, ಚೆನ್ನೈನ ಹೊರವಲಯದಲ್ಲಿರುವ ಖಾಸಗಿ ಕಾಲೇಜೊಂದರಲ್ಲಿ ಧನುಷ್ ಕಲ್ಯಾಣ ಚಳುವಳಿ ಆಯೋಜಿಸಿದ್ದ ಸಭೆಯಲ್ಲಿ ಭಾಗವಹಿಸಿದ್ದರು. ಈ ಘಟನೆಯು ನಟನ ರಾಜಕೀಯ ಪ್ರವೇಶದ ಕುರಿತಾದ ಊಹಾಪೋಹಗಳಿಗೆ ಪುಷ್ಟಿ ನೀಡಿದೆ. ಧನುಷ್ ತಮ್ಮ ಬೆಂಬಲಿಗರೊಂದಿಗೆ ಸಂವಾದ ನಡೆಸಿದರು, ಅವರೊಂದಿಗೆ ಪ್ರತ್ಯೇಕವಾಗಿ ಫೋಟೋಗಳಿಗೆ ಪೋಸ್ ನೀಡಿದರು ಮತ್ತು ದೀಪಾವಳಿಯ ಪ್ರಯುಕ್ತ ಪ್ರತಿಯೊಬ್ಬ-ರಿಗೂ ಬೆಳ್ಳಿಯ ದೀಪವೊಂದನ್ನು ಉಡು-ಗೊರೆಯಾಗಿ ನೀಡಿದರು. ಆದಾಗ್ಯೂ, ಈ ಕಾರ್ಯಕ್ರಮದಲ್ಲಿ ಅವರು ಯಾವುದೇ ರಾಜ-ಕೀಯ ಭಾಷಣ ಮಾಡುವುದನ್ನು ತಪ್ಪಿಸಿದರು. ತಮಿಳುನಾಡಿನಾದ್ಯಂತ ಇರುವ ಧನುಷ್ ಕಲ್ಯಾಣ ಚಳುವಳಿಯ ಪದಾಧಿಕಾರಿಗಳು ನಟನನ್ನು ಭೇಟಿಯಾಗಲು ಈ ಸ್ಥಳದಲ್ಲಿ ಜಮಾಯಿಸಿದ್ದರು.ಇತರ ನಟರಿಗಿಂತ ಧನುಷ್ ಭಿನ್ನರಾಗಿದ್ದಾರೆ ಮತ್ತು ಅವರು ಅತ್ಯಂತ ಸರಳ ವ್ಯಕ್ತಿತ್ವದವರು, ಹೀಗಾಗಿ ಅವರು ರಾಜಕೀಯಕ್ಕೆ ಬರಬೇಕೆಂದು ನಾವು ಬಯಸುತ್ತೇವೆ, ಎಂದು ಕಾರೈಕುಡಿಯಿಂದ ಬಂದಿದ್ದ ಪದಾಧಿಕಾ-



ರಿಯೊಬ್ಬರು ಹೇಳಿದರು.

ಆದರೆ, ನಟ ಬರುವಲ್ಲಿ ತಡವಾದ ಕಾರಣ ಈ ಕಾರ್ಯಕ್ರಮವು ಟೀಕೆಗೂ ಗು-ರಿಯಾಯಿತು. ಬೆಳಿಗ್ಗೆ ನಿಗದಿಯಾಗಿದ್ದ ಈ ಸಭೆಗೆ ಧನುಷ್ ಮಧ್ಯಾಹ್ನ ಸುಮಾರು 2:40 ರ ಸುಮಾರಿಗೆ ಆಗಮಿಸಿದರು. ಅಲ್ಲಿ ಮಧ್ಯಾಹ್ನದ ಊಟದ ವ್ಯವಸ್ಥೆ ಇದ್ದರೂ, ಅನೇಕ ಪದಾಧಿಕಾ-ರಿಗಳು ಗಂಟೆಗಟ್ಟಲೆ ಕಾಯಬೇಕಾಯಿತು. ಧನುಷ್ ತಮ್ಮ ಬೆಂಬಲಿಗರೊಂದಿಗೆ ನಡೆಸಿದ ಇತ್ತೀಚಿನ ಸಂವಾದಗಳಲ್ಲಿ ಇದೂ ಒಂದಾಗಿದ್ದು, ವಿಶೇಷವಾಗಿ ಮಹಿಳಾ ಪದಾಧಿಕಾರಿಗಳ ಮೇಲೆ ಮಾತ್ರ ಗಮನ ಕೇಂದ್ರೀಕರಿಸಿದ್ದರಿಂದ ಇದು ಹೆಚ್ಚಿನ ಗಮನ ಸೆಳೆದಿದೆ. 2026ರ ತಮಿಳುನಾಡು ವಿಧಾನಸಭಾ ಚುನಾವಣೆಯಲ್ಲಿ ನಟ ವಿಜಯ್ ಅವರ ರಾಜಕೀಯ ಯಶಸ್ಸಿನ ಬೆನ್ನಲ್ಲೇ, ಧನುಷ್ ಕೂಡ ಮಹಿಳೆಯರ ನಡುವೆ ತಮ್ಮ ಬೆಂಬಲದ ನೆಲೆಯನ್ನು ವಿಸ್ತ-ರಿಸಿಕೊಳ್ಳಲು ಪ್ರಯತ್ನಿಸುತ್ತಿದ್ದಾರೆಯೇ ಎಂಬ ಊಹಾಪೋಹಗಳಿಗೆ ಈ ಸಭೆ ಎಡೆಮಾಡಿಕೊಟ್ಟಿದೆ. ಆದಾಗ್ಯೂ, ಧನುಷ್ ರಾಜಕೀಯ ಪ್ರವೇಶದ ಬಗ್ಗೆ ಯಾವುದೇ ಅಧಿಕೃತ ಘೋಷಣೆ ಮಾಡಿಲ್ಲ.ಇದೇ ವೇಳೆ, ಕಾಂಗ್ರೆಸ್ ಮತ್ತು ಟಿವಿಕೆ ಪಕ್ಷಗಳ ನಾಯಕರು, ಧನುಷ್ ಅವರ ರಾಜಕೀಯ ಪ್ರವೇಶದ ಕು-ರಿತಾದ ಊಹಾಪೋಹಗಳನ್ನು ಬಿಜೆಪಿ ಜೊತೆಗೆ ಜೋಡಿಸುವಂತಹ ಹೇಳಿಕೆಗಳನ್ನು ನೀಡಿದ್ದಾರೆ.

ಧನುಷ್ ರಾಜಕೀಯಕ್ಕೆ ಪ್ರವೇಶಿಸುವ ಸಾಧ್ಯತೆಯ ಕುರಿತಾದ ಪ್ರಶ್ನೆಗಳಿಗೆ ಪ್ರತಿಕ್ರಿಯಿಸಿದ ತಮಿಳುನಾಡು ಕಾಂಗ್ರೆಸ್ ಮುಖ್ಯಸ್ಥ ಮಾಣಿಕಂ ಟ್ಯಾಗೋರ್ ಅವರು ಬಿಜೆಪಿಯು ಒಬ್ಬ ಚಲನಚಿತ್ರ ತಾರೆಯನ್ನು ರಾಜಕೀಯ ಮುಖವಾಗಿ ಬಿಂಬಿಸಲು ಪ್ರಯತ್ನಿಸುತ್ತಿದೆ, ಎಂದು ಹೇಳಿದರು. ಅವರು (ಬಿಜೆಪಿ) ಒಬ್ಬ ಚಲನಚಿತ್ರ ತಾರೆಯನ್ನು ತಮ್ಮ ಮುಖವಾಗಿ ಬಳಸಿಕೊಳ್ಳಲು ಬಯಸಿದ್ದರು. ಅವರು ಈಗಾಗಲೇ ಎಐಎಡಿ-ಎಂಕೆ ಪಕ್ಷವನ್ನು ಮುಗಿಸಿದ್ದಾರೆ. ರಜನಿಕಾಂತ್ ಅವರ ಮೂಲಕ ಪಕ್ಷವೊಂದನ್ನು ಆರಂಭಿಸಲು ಅವರು ಪ್ರಯತ್ನಿಸಿದ್ದರು. ಈಗ ಅಣ್ಣಾಮಲೈ ಅವರ ಮೂಲಕ ಹೊಸ ಸಂಘಟನೆಯೊಂದನ್ನು ರಚಿಸಿದ್ದಾರೆ. ಇವೆಲ್ಲವೂ ಒಂದೇ ಸಿದ್ಧಾಂತದ ಕಡೆಗೆ, ಅಂದರೆ ಅಮಿತ್ ಶಾ ಅವರ ಸಿದ್ಧಾಂತದ ಕಡೆಗೆ ವಾಲಿಕೊಂಡಿವೆ.

ಆದಾಗ್ಯೂ, ಯಾರಾದರೂ ಪಕ್ಷವನ್ನು ಆರಂಭಿಸುವ ಸ್ವಾತಂತ್ರ್ಯವನ್ನು ಹೊಂದಿರುತ್ತಾರೆ, ಹಾಗಾಗಿ ಇದೊಂದು ಹೊಸ ಬಗೆಯ ಪಕ್ಷ ಎಂದು ನಾವು ಭಾವಿಸುತ್ತೇವೆ, ಎಂದು ಟ್ಯಾಗೋರ್ ಹೇಳಿದರು. ಟಿವಿಕೆ ನಾಯಕರೊಬ್ಬರು ಮತ್ತು ಸಚಿವರು, ಹೊಸದಾಗಿ ರಾಜಕೀಯ ಪ್ರವೇಶಿಸುತ್ತಿರುವವರಿಗೆ ದೆಹಲಿಯ ಶಕ್ತಿಗಳ ಬೆಂಬಲವಿದೆ ಎಂದು ಸುಳಿವು ನೀಡಿದರು. ಅದೇ ವೇಳೆ, ಇಂತಹ ಹೊಸ ಪಕ್ಷಗಳ ಉದಯವು ಮುಖ್ಯಮಂತ್ರಿ ವಿಜಯ್ ಅವರಿಗೆ ಯಾವುದೇ ಸವಾಲೊಡ್ಡುವುದಿಲ್ಲ ಎಂದು ಅವರು ಪ್ರತಿಪಾದಿಸಿದರು.

## ಉತ್ತರ ಪ್ರದೇಶದಲ್ಲಿ ಮತ್ತೆ ಯೋಗಿ ಸರ್ಕಾರ ಬರಲು ಬಿಡಲ್ಲ ; ಓವೈಸಿ



ಮುಜಾಫರ್‌ನಗರ: ಉತ್ತರ ಪ್ರದೇಶದಲ್ಲಿ ಬಿಜೆಪಿ ಸರ್ಕಾರ ರಚನೆಯಾಗದಂತೆ ತಡೆಯಲು ತಮ್ಮ ಪಕ್ಷವು ಎಲ್ಲ ರೀತಿಯ ಪ್ರಯತ್ನಗಳನ್ನು ಮಾಡಲಿದೆ ಎಂದು ಆಲ್ ಇಂಡಿಯಾ ಮಜ್ಲಿಸ್-ಎ-ಇತ್ತೆಹಾ ಮುಸ್ಲಿಮೀನ್ (ಎಐ-ಎಂಐಎಂ) ಮುಖ್ಯಸ್ಥ ಅಸದುದ್ದೀನ್ ಓವೈಸಿ ಹೇಳಿದ್ದಾರೆ.

ಶಾಮ್ಲಿ ಜಿಲ್ಲೆಯ ಕೈರಾನಾದಲ್ಲಿ ನಡೆದ ಸಾರ್ವಜನಿಕ ಸಭೆಯಲ್ಲಿ ಮಾತನಾಡಿದ ಓವೈಸಿ, ಬಿಜೆಪಿ ಸರ್ಕಾರ ರಚನೆಯಾಗದಂತೆ ನೋಡಿಕೊಳ್ಳಲು ನಾವು ಎಲ್ಲ ಪ್ರಯತ್ನಗಳನ್ನು ಮಾಡುತ್ತೇವೆ ಎಂದು ಹೇಳಿದರು. ಯೋಗಿ ಆದಿತ್ಯನಾಥ್ ಅವರು ಮೂರನೇ ಬಾರಿಗೆ ಉತ್ತರ ಪ್ರದೇಶದ ಮುಖ್ಯಮಂತ್ರಿಯಾಗುವುದನ್ನು ತಮ್ಮ ಪಕ್ಷ ಬಯಸುವುದಿಲ್ಲ ಎಂದೂ ಅವರು ತಿಳಿಸಿದರು. ಇತರ ವಿರೋಧ ಪಕ್ಷಗಳಿಗೂ ಇದೇ ಗುರಿ ಇದ್ದರೆ, ಅವರೊಂದಿಗೆ ಕೈಜೋಡಿಸಲು ಎಐಎಂಐಎಂ ಸಿದ್ಧವಾಗಿದೆ ಎಂದು ಅವರು ಹೇಳಿದರು. ಅಲ್ಪಸಂಖ್ಯಾತರು ಮತ್ತು ಸಮಾಜದ ಇತರ ದುರ್ಬಲ ವರ್ಗಗಳ ಸಮಸ್ಯೆಗಳನ್ನು ಎತ್ತಿ ಹಿಡಿಯುವಲ್ಲಿ ವಿರೋಧ ಪಕ್ಷಗಳು ವಿಫಲವಾಗಿವೆ ಎಂದು ಓವೈಸಿ ಟೀಕಿಸಿದರು. ಬಿಜೆಪಿ ನೇತೃತ್ವದ ಸರ್ಕಾರದ ಅವಧಿಯಲ್ಲಿ ರಾಜ್ಯದಲ್ಲಿ ಮಸೀದಿಗಳನ್ನು ಧ್ವಂಸಗೊಳಿಸಲಾಗುತ್ತಿದೆ ಮತ್ತು ಹಾಫ್ ಎನ್‌ಕೌಂಟರ್‌ಗಳು (ಗಾಯಗೊಳಿಸುವ ಎನ್‌ಕೌಂಟರ್‌ಗಳು) ಮುಂದುವರಿದಿವೆ ಎಂದು ಆರೋಪಿಸಿದ ಅವರು, ಈ ವಿಷಯಗಳ ಬಗ್ಗೆ ವಿರೋಧ ಪಕ್ಷಗಳು ಮೌನ ವಹಿಸಿವೆ ಎಂದು ದೂರಿದರು.

# ಖರ್ಗೆಜಿಯ 'ಮೋದಿ ಬಾಪ್' ಹೇಳಿಕೆಗೆ ಕಾಂಗ್ರೆಸ್ ಸಮರ್ಥನೆ, ದೇಶಾದ್ಯಂತ ಬಿಜೆಪಿ ಪ್ರತಿಭಟನೆ

ನವದೆಹಲಿ: ಪ್ರಧಾನಿ ನರೇಂದ್ರ ಮೋದಿ ಅವರನ್ನು ಉಲ್ಲೇಖಿಸಿ ಕಾಂಗ್ರೆಸ್ ರಾಷ್ಟ್ರೀಯ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ನೀಡಿರುವ 'ಬಾಪ್' ಹೇಳಿಕೆ ದೇಶದ ರಾಜಕೀಯ ವಲಯದಲ್ಲಿ ಭಾರಿ ವಿವಾದಕ್ಕೆ ಕಾರಣವಾಗಿದೆ. ಖರ್ಗೆ ಹೇಳಿಕೆಯನ್ನು ಖಂಡಿಸಿರುವ ಬಿಜೆಪಿ, ಕಾಂಗ್ರೆಸ್ ವಿರುದ್ಧ ದೇಶಾದ್ಯಂತ ಪ್ರತಿಭಟನೆ ನಡೆಸಲು ಸಿದ್ಧತೆ ನಡೆಸಿದೆ.ಮತ್ತೊಂದೆಡೆ, ಕಾಂಗ್ರೆಸ್ ತನ್ನ ಅಧ್ಯಕ್ಷರ ಬೆಂಬಲಕ್ಕೆ ನಿಂತಿ-ದ್ದು, ಬಿಜೆಪಿ ನಿರಂತರವಾಗಿ ಖರ್ಗೆ ಅವರನ್ನು ಅಗೌರವಿಸುತ್ತಿರುವುದೇ ಇಂತಹ ಹೇಳಿಕೆಗಳಿಗೆ ಕಾರಣ ಎಂದು ಸಮರ್ಥಿಸಿಕೊಂಡಿದೆ.

ಮುಂಬರುವ ದಿನಗಳಲ್ಲಿ ಈ ವಿವಾದ ರಾಜಕೀಯ ಸಂಘರ್ಷವಾಗಿ ಮತ್ತಷ್ಟು ತೀವ್ರಗೊಳ್ಳುವ ಸಾಧ್ಯತೆ ವ್ಯಕ್ತವಾಗಿದೆ. ಕೇಂದ್ರ ಸಚಿವರು, ಬಿಜೆಪಿ ಮುಖ್ಯಮಂತ್ರಿಗಳು, ಸಂಸದರು ಸೇರಿದಂತೆ ಹಲವು ನಾಯಕರು ಖರ್ಗೆ ಅವರ ಹೇಳಿಕೆಯನ್ನು ಆಕ್ಷೇಪಿಸಿದ್ದು, ಕಾಂಗ್ರೆಸ್ ಸಾರ್ವಜನಿಕವಾಗಿ ಕ್ಷಮೆಯಾಚಿಸಬೇಕು ಎಂದು ಆಗ್ರಹಿಸಿದ್ದಾರೆ. ಮಲ್ಲಿಕಾರ್ಜುನ ಖರ್ಗೆ ಅವರ ಹೇಳಿಕೆಯನ್ನು ಅವಹೇಳನಕಾರಿ ಮತ್ತು ರಾಜ-ಕೀಯ ಭಾಷೆಯ ಘನತೆಗೆ ವಿರುದ್ಧವಾದದ್ದು ಎಂದು ಬಿಜೆಪಿ ನಾಯಕರು ಟೀಕಿಸಿದ್ದಾರೆ. ಇಂತಹ ಮಾತುಗಳು ಭಾರತದ ರಾಜ-ಕೀಯ ಸಂಸ್ಕೃತಿ, ಮೂಲ ಮೌಲ್ಯಗಳು ಮತ್ತು ಸಾರ್ವಜನಿಕ ಜೀವನದಲ್ಲಿ ಪಾಲಿಸಬೇಕಾದ ಸಂಪ್ರದಾಯಗಳಿಗೆ ವಿರುದ್ಧವಾಗಿವೆ ಎಂದು ಅಭಿಪ್ರಾಯಪಟ್ಟಿದ್ದಾರೆ. ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಖರ್ಗೆ ವಿರುದ್ಧ ವಾಗ್ದಾಳಿ ನಡೆಸಿದ್ದು, ಇಂತಹ ಹೇಳಿಕೆಗಳನ್ನು ನೀಡುತ್ತಿರುವುದು ಇದೇ ಮೊದಲಲ್ಲ ಎಂದು ಆರೋಪಿಸಿದ್ದಾರೆ. ಕಾಂಗ್ರೆಸ್ ನಾಯಕರು ಚುನಾವಣಾ ಸೋಲುಗಳಿಂದ ಹತಾಶರಾಗಿ ಸಾರ್ವಜನಿಕವಾಗಿ ಬಳಸುವ ಭಾಷೆಯ ಮಟ್ಟವನ್ನು ಕುಗ್ಗಿಸುತ್ತಿದ್ದಾರೆ ಎಂಬುದು ಬಿಜೆಪಿ ನಾಯಕರ ಪ್ರಮುಖ ಟೀಕೆಯಾಗಿದೆ. ಕೇಂದ್ರ ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಕೂಡ ಖರ್ಗೆ ಅವರ ಹೇಳಿಕೆಯನ್ನು ಖಂಡಿಸಿದ್ದಾರೆ. ಕಾಂಗ್ರೆಸ್‌ನ ಚುನಾವಣಾ ವೈಫಲ್ಯಗಳು ಪಕ್ಷದ ನಾಯಕರನ್ನು ಕೆರಳಿಸಿವೆ ಎಂದು ಟೀಕಿಸಿದ ಅವರು, ರಾಷ್ಟ್ರೀಯ ಅಧ್ಯಕ್ಷ ಸ್ಥಾನದಲ್ಲಿರುವ ವ್ಯಕ್ತಿ ಇಂತಹ ಭಾಷೆ ಬಳಸುವುದು ಸರಿಯೇ



ಎಂಬುದನ್ನು ಕಾಂಗ್ರೆಸ್ ಆತ್ಮಾವಲೋಕನ ಮಾಡಿಕೊಳ್ಳಬೇಕು ಎಂದು ಹೇಳಿದ್ದಾರೆ. ಖರ್ಗೆ ಅವರನ್ನು ಅಧ್ಯಕ್ಷ ಸ್ಥಾನದಿಂದ ತೆಗೆದುಹಾಕಬೇಕೇ ಎಂಬ ಪ್ರಶ್ನೆಯನ್ನೂ ಅವರು ಮುಂದಿಟ್ಟಿದ್ದು, ಈ ಹೇಳಿಕೆಗೆ ಕಾಂಗ್ರೆಸ್ ಪಕ್ಷವೇ ಹೊಣೆ ಹೊತ್ತು ಉತ್ತರ ನೀಡಬೇಕು ಎಂದು ಆಗ್ರಹಿಸಿದ್ದಾರೆ.

ಖರ್ಗೆ ಅವರ ಹೇಳಿಕೆಯನ್ನು ರಾಜ-ಕೀಯವಾಗಿ ಗಂಭೀರವಾಗಿ ಪರಿಗಣಿಸಿರುವ ಬಿಜೆಪಿ, ಸೋಮವಾರ ದೇಶಾದ್ಯಂತ ತನ್ನ ಪ್ರಮುಖ ಪಕ್ಷದ ಕಚೇರಿಗಳ ಎದುರು ಪ್ರತಿಭಟನೆ ನಡೆಸಲು ಯೋಜಿಸಿದೆ. ಕಾಂಗ್ರೆಸ್ ನಾಯಕತ್ವದ ವಿರುದ್ಧ ಜನಾಭಿಪ್ರಾಯ ರೂಪಿಸುವುದು ಮತ್ತು ಖರ್ಗೆ ಅವರ ಹೇಳಿಕೆಗೆ ಕ್ಷಮೆಯಾಚನೆ ಪಡೆಯುವುದು ಈ ಪ್ರತಿಭಟನೆಯ ಪ್ರಮುಖ ಉದ್ದೇಶಗಳಾಗಿವೆ.

## ಮನುಕುಲಕ್ಕೆ ಮೌಲ್ಯ ತೋರುವ ರಾಮಾಯಣ ನೀಡಿದ ಮಹರ್ಷಿ ವಾಲ್ಮೀಕಿ ಎಪಿಎಂಸಿ ಮಾಜಿ ಸದಸ್ಯ ಹಂಚ್ಯಾಳಪ್ಪ ತಳವಾರ ಅಭಿಮತ ಜಯಂತಿ ಆಚರಣೆ



ಧೃತಿ ನ್ಯೂಸ್ ಸುದ್ದಿ

ಕುಕನೂರು: ಮಹರ್ಷಿ ವಾಲ್ಮೀಕಿ ಮನುಕುಲಕ್ಕೆ ಮೌಲ್ಯದ ದಾರಿದೀಪ ಆಗಿರುವ ರಾಮಾಯಣ ರಚಿಸಿದರು ಎಂದು ಎಪಿಎಂಸಿ ಮಾಜಿ ಸದಸ್ಯ ಹಂಚ್ಯಾಳಪ್ಪ ತಳವಾರ ಹೇಳಿದರು.

ಪಟ್ಟಣದ ತಹಸೀಲ್ದಾರ ಕಚೇರಿಯಲ್ಲಿ ಶ್ರೀ ಮಹರ್ಷಿ ವಾಲ್ಮೀಕಿ ಜಯಂತಿ ಆಚರಿಸಿ ಮಾತನಾಡಿದ ಅವರು, ವಾಲ್ಮೀಕಿ ಮಹರ್ಷಿ ರಚಿಸಿದ ರಾಮಾಯಣ ಜಗತ್ತಿನ ಮಹತ್ತರ ಗ್ರಂಥದಲ್ಲಿ ಒಂದು. ಇಡೀ ಜಗತ್ತು ರಾಮಾಯಣವನ್ನು ಆರಾಧಿಸುತ್ತದೆ. ಮಹರ್ಷಿ ವಾಲ್ಮೀಕಿ ಕೊಡುಗೆ ಅಪಾರ ಎಂದರು. ವಾಲ್ಮೀಕಿ ಸಮುದಾಯಕ್ಕೆ ಸೇರಬೇಕಾದ ಮೀಸಲಾತಿಯನ್ನು ಸರ್ಕಾರ ನೀಡಬೇಕು. ಸಮುದಾಯದ ನಿರ್ಲಕ್ಷ್ಯ ಸಲ್ಲದು ಎಂದರು.
ತಾಪಂ ಇಒ ಬೆಟದಪ್ಪ ಮಾಳೆಕೊಪ್ಪ ಮಾತನಾಡಿ, ಜನ್ಮಕ್ಕಿಂತ ಸಾಧನೆ ದೊಡ್ಡದು, ಹಿನ್ನೆಲೆಗಿಂತ ಜ್ಞಾನ ಮತ್ತು ಪರಿಶ್ರಮ ಮುಖ್ಯ ಎಂಬುದನ್ನು ಸಾರುವ ವಾಲ್ಮೀಕಿ ಮಹರ್ಷಿ ಅವರ ಬದುಕು ಸಮಾನತೆ ಮತ್ತು ಸಾಮಾಜಿಕ ನ್ಯಾಯದಲ್ಲಿ ನಂಬಿಕೆಯಿಟ್ಟ ಪ್ರತಿಯೊಬ್ಬರಿಗೂ ಪ್ರೇರಣೆಯಾಗಿದೆ. ಶ್ರೀ ವಾಲ್ಮೀಕಿಯವರ ಚಿಂತನೆಗಳು ನಮಗೆ ಮಾನವೀಯತೆ, ಸತ್ಯ, ನ್ಯಾಯ, ನಂಬಿಕೆ, ಮತ್ತು ಸಮಾನತೆಯ ಹಾದಿಯಲ್ಲಿ ಸಾಗಲು ಮಾನವ ಜನಾಂಗಕ್ಕೆ ಯುವ ಜನತೆಗೆ ಸ್ಫೂರ್ತಿ ಹಾಗೂ ದಾರಿದೀಪವಾಗಲಿ ಎಂದರು. ಗ್ರೇಡ್ 2 ತಹಸೀಲ್ದಾರ ಮುರುಳೀಧರರಾವ್ ಕುಲಕರ್ಣಿ, ಪ್ರಮುಖರಾದ ಮಂಗಳೇಶ ಮಂಗಳೂರು, ಪ್ರಕಾಶ ತಹಸೀಲ್ದಾರ ಹಾಗೂ ವಾಲ್ಮೀಕಿ ಸಮುದಾಯದ ಗಣ್ಯರಿದ್ದರು. ನಂತರ ಸಮುದಾಯ ಮೀಸಲಾತಿ ಘೋಷಣೆ ಕುರಿತು ಮನವಿ ಸಲ್ಲಿಸಿದರು. ಜಯಂತಿ ಆಚರಣೆಗೆ ಬಾರದ ತಹಸೀಲ್ದಾರ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಈ ನಮ್ಮ ಧೃತಿ ನ್ಯೂಸ್
ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.
ಮೊ: 7353595904

# ಮಾಗಡಿ ತಾಲ್ಲೂಕಿನ ಮುತ್ತಯ್ಯನಪಾಳ್ಯ ಗ್ರಾಮದಲ್ಲಿ 108 ಗಣಪತಿಗಳ ವಿಶೇಷ ಪ್ರತಿಷ್ಠಾಪನೆ

ಬೆಂಗಳೂರು: ಶ್ರೀ ಆದಿ ಮೂಲ ಮಹಾಗಣಪತಿ ಸೇವಾ ಸಮಿತಿ ವತಿಯಿಂದ ಮಾಗಡಿ ತಾಲ್ಲೂಕು ಕುದೂರು ಹೋಬಳಿ ಮುತ್ತಯ್ಯನಪಾಳ್ಯ ಗ್ರಾಮದಲ್ಲಿ 108 ಗಣಪತಿಗಳ ವಿಶೇಷ ಪ್ರತಿಷ್ಠಾಪನೆ ಹಾಗೂ ಧಾರ್ಮಿಕ ಕಾರ್ಯಕ್ರಮಗಳನ್ನು ಆಯೋಜಿಸಿದೆ.ವಿಶೇಷವೆಂದರೆ ವಿಶ್ವದ ನಾನಾ ಭಾಗಗಳಲ್ಲಿ ಪೂಜಿಸುವ ಗಣಪತಿಯನ್ನು ಇಲ್ಲಿ ಜೇಡಿಮಣ್ಣಿನಿಂದ ಪ್ರತಿರೂಪದಂತೆ ನಿರ್ಮಿಸಿ ಅದನ್ನು ಇಲ್ಲಿ ಭಕ್ತರಿಗೆ ವೀಕ್ಷಿಸುವ ಅಪೂರ್ವ ಅವಕಾಶ ಲಭಿಸಲಿದೆ.

ಇಡೀ ದೇಶದಲ್ಲೇ ಪ್ರಥ-ಮ ಎಂಬಂತೆ ಗಣೇಶ ಮೂರ್ತಿಗಳನ್ನು ಇಲ್ಲಿ ಪ್ರತಿಷ್ಠಾಪಿಸಲಾಗುತ್ತಿದ್ದು, ಇದನ್ನು ಕಳೆದ ಆರು ತಿಂಗಳಿನಿಂದ ಜೇಡಿಮಣ್ಣಿನಿಂದಲೇ ತಯಾ-ರಿಸಲಾಗಿದೆ.ಶಿವಮೊಗ್ಗದ ಶಿಲ್ಪಿಗಳು ಇದನ್ನು ತಯಾರಿಸಿದ್ದು, ಈಗಾಗಲೇ ಅದನ್ನು ಮಾಗಡಿಗೆ ತರಲಾಗಿದೆ. ಅ.28 ರಿಂದ ಐದು ದಿನಗಳ ಕಾಲ ನಡೆಯುವ ವೈಭವ ಈ ಗಣೇಶೋತ್ಸವದಲ್ಲಿ ಹಲವಾರು ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ. ಅ.28 ರಂದು ಬೆಳಗ್ಗೆ 9 ಗಂಟೆಗೆ ಗಣಪತಿ ಮಹಾಯಾಗ ನಡೆಯಲಿದ್ದು, ಡಾ.ಪಿ.ಆರ್.ನಾರಾಯಣಚಾರ್ಯ ಅವರು ಇದರ ನೇತೃತ್ವವನ್ನು ವಹಿಸಲಿದ್ದಾರೆ. ಸಂಜೆ 5 ಗಂಟೆಗೆ ನಂಜನಗೂಡಿನ ಶ್ರೀ ನಾಗಚಂದ್ರ ದೀಕ್ಷಿತ್ ಅವರ ಮತ್ತವರ ತಂಡದಿಂದ ಗಿರಿಜಾ ಕಲ್ಯಾಣೋತ್ಸವ ಧಾರ್ಮಿಕ ಕಾರ್ಯಕ್ರಮಗಳು ನಡೆಯಲಿದೆ.ಅ.29 ರಂದು ಮಹಾಪೂಜೆ ಹಾಗೂ




ಪ್ರಸಾದ ವಿನಿಯೋಗ ಹಾಗೂ ಮನರಂಜನಾ ಕಾರ್ಯಕ್ರಮಗಳು ನಡೆಯಲಿವೆ. ಗ್ರಾಮೀಣ ಸೊಗಡನ್ನು ಮೈಗೂಡಿಸುವ ನಿಟ್ಟಿನಲ್ಲಿ ವಿಶೇಷ ಕಾರ್ಯಕ್ರಮಗಳನ್ನು ಹಮಿಕೊಳ್ಳಲಾಗಿದ್ದು, ರಾಜ್ಯಮಟ್ಟದ ಹೊನಲು ಬೆಳಕಿನ ಪುರುಷರು ಹಾಗೂ ಮಹಿಳಾ ತಂಡಗಳ ಕಬಡ್ಡಿ ಪಂದ್ಯಾವಳಿ ನಡೆಯಲಿದೆ. ನ.1 ರಂದು ರಾಜ್ಯೋತ್ಸವದ ಜೊತೆಗೆ ಸಾಂಸ್ಕೃತಿಕ ಕಲಾತಂಡಗಳೊಂದಿಗೆ 108 ಗಣಪತಿಗಳ ಅದ್ದೂರಿ ಮೆರವಣಿಗೆ ನಡೆಯಲಿದೆ.ಈ ಧಾರ್ಮಿಕ ಕಾರ್ಯದಲ್ಲಿ ಆದಿಚುಂಚನಗಿರಿ ಮಹಾ ಸಂಸ್ಥಾನ ಮಠದ ಡಾ.ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ, ನೊಣವಿನಕೆರೆ ಕಾಡು ಸಿದ್ದೇಶ್ವರ ಮಠದ ಡಾ.ಶ್ರೀ ಕರಿವೃಷಭ ದೇಶಿಕೇಂದ್ರ ಶಿವಯೋಗೇಶ್ವರ ಮಹಾಸ್ವಾಮೀಜಿ, ಸಿದ್ದಗಂಗಾ ಮಠದ ಶ್ರೀ ಸಿದ್ದಲಿಂಗ ಸ್ವಾಮೀಜಿ ದಿವ್ಯ ಸಾನಿಧ್ಯ ವಹಿಸಲಿದ್ದು, ಧರ್ಮಸ್ಥಳದ ಧರ್ಮಾಧಿಕಾರಿಗಳು ಹಾಗೂ ರಾಜ್ಯಸಭಾ ಸದಸ್ಯರಾದ ಡಾ. ವೀರೇಂದ್ರಹೆಗಡೆ, ವಿದ್ವಾನ್ ಗಣೇಶ ಘನಪಾಠಿ, ಶ್ರೀ ಅನ್ನದಾನೇಶ್ವರ ಸ್ವಾಮೀಜಿ, ಶ್ರೀ ದ್ವಾರಕಾನಾಥ ಗುರೂಜಿ, ಶ್ರೀ ರಂಗನಾಥ ಸ್ವಾಮೀಜಿ, ಡಾ.ಶ್ರೀ ಸಿದ್ದರಾಜು ಸ್ವಾಮೀಜಿ, ಶ್ರೀ ಸೋಮನಾಥ ಸ್ವಾಮೀಜಿ, ಶ್ರೀ ವಿಜಯನಾರಸಿಂಹ ಗುರುಗಳು, ನಂಜನಗೂಡಿನ ವೆಂಕಟೇಶ ಶಾಸ್ತ್ರಿ ಹಾಗೂ ಎಂ.ಆರ್. ರಾಮಸ್ವಾಮಿಯವರು ಪಾಲ್ಗೊಳ್ಳುತ್ತಿದ್ದಾರೆ.

ಸ್ಥಳೀಯ ಶಾಸಕರು ಹಾಗೂ ಪೌರಾಡಳಿತ ಸಚಿವ ಎಚ್.ಸಿ.ಬಾಲಕೃಷ್ಣ, ಬಮುಲ್ ಅಧ್ಯಕ್ಷ ಡಿ.ಕೆ.ಸುರೇಶ್, ಗ್ಯಾರಂಟಿ ಯೋಜನಾ ಅನುಷ್ಠಾನ ಸಮಿತಿಯ ಅಧ್ಯಕ್ಷ ಎಚ್.ಎಂ.ರೇವಣ್ಣ, ಶಾಸಕ ಎಂ.ಕೃಷ್ಣಪ್ಪ, ಪ್ರಿಯಕೃಷ್ಣ, ರಮಣಶ್ರೀ ಪ್ರತಿಷ್ಠಾನದ ಎಸ್.ಷಡಾಕ್ಷರಿ, ಸಂಸದ ಸಿ.ಎನ್.ಮಂಜುನಾಥ್ ಸೇರಿದಂತೆ ಹಲವಾರು ಗಣ್ಯರು, ಜನಪ್ರತಿನಿಧಿಗಳು ಪಾಲ್ಗೊಳ್ಳುತ್ತಿದ್ದಾರೆ. ಕಾರ್ಯಕ್ರಮಕ್ಕೆ ಭಾಗವಹಿಸುವ ಭಕ್ತಾದಿಗಳಿಗಾಗಿ ವಿಶೇಷ ಬಹುಮಾನ ಯೋಜನೆಯನ್ನು ಹಮಿಕೊಳ್ಳಲಾಗಿದೆ. ಪ್ರಥಮ ಪೂಜೆ ಪಡೆಯುವ ವಿಘ್ನನಿವಾರಕ ಗಣೇಶನನ್ನು ಬಾದ್ರಪದದ ಚೌತಿಯಂದು ವಿಶೇಷವಾಗಿ ಪೂಜಿಸಲಾಗುತ್ತದೆ. ಧರ್ಮಶಾಸ್ತ್ರದ ಪ್ರಕಾರ ಅಂ-ದು 108 ಗಣೇಶನನ್ನು ನೋಡಬೇಕೆಂಬ ಪ್ರತೀತಿ ಇದೆ.ಹಿಂದೆ ಮಕ್ಕಳು ಮನೆಮನೆಗೆ ಭೇಟಿ ನೀಡಿ ಗಣೇಶನಿಗೆ ಅಕ್ಷತೆಯನ್ನು ಹಾಕಿ ನಮಿಸುತ್ತಿದ್ದರು. ಅದು ಈಗಲೂ ಮುಂದುವರೆದಿದೆ. ಆದ-ರೆ ಎಲ್ಲರೂ 108 ಗಣೇಶನನ್ನು ವೀಕ್ಷಿಸಲು ಸಾಧ್ಯವಾಗುವುದಿಲ್ಲ. ಹಾಗಾಗಿ ಶ್ರೀ ಆದಿ ಮೂಲ ಮಹಾಗಣಪತಿ ಸೇವಾ ಸಮಿತಿ ವಿಶೇಷ ಗಣೇಶೋತ್ಸವವನ್ನು ಆಯೋಜಿಸುತ್ತಿದೆ. ಇದರಲ್ಲಿ ಗಣೇಶನ ಮೂರ್ತಿಗಳನ್ನು ಪೂಜಿಸುವುದ-ರಿಂದ ಹಿಡಿದು ವಿಸರ್ಜನೆವರೆಗೂ ಭಕ್ತಾದಿಗಳಿಗೆ ವಿಶೇಷ ವ್ಯವಸ್ಥೆಗಳನ್ನು ಮಾಡಲಾಗುತ್ತಿದೆ.ಇಂ-ಡೋನೇಷ್ಯಾ, ಜಪಾನ್, ಥೈಲಾಂಡ್, ಅಮೆ-ರಿಕ ಸೇರಿದಂತೆ ವಿವಿಧೆಡೆ ಗಣೇಶನನ್ನು ಭಕ್ತಿ ಭಾವದಿಂದ ಪೂಜಿಸುತ್ತಾರೆ. ಅಲ್ಲಿನ ಆಕೃತಿಯನ್ನೇ ಹೋಲುವ ಗಣೇಶಮೂರ್ತಿಗಳನ್ನು ಇಲ್ಲಿ ನೋಡಬಹುದಾಗಿದೆ.

Publisher and Owned by CHANDRAKANTA From Near Durgamma Temple Dyampur, Koppal District- 583232 Printed at VINAYA Printers, VINAYA Publication Word No.01 Ballary Pootwer, Bhagynagar, Koppal- 583238, Editor : CHANDRAKANTA enammadhruthinews@gmail.com